ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ), ಬೆಂಗಳೂರು ಪ್ರಕಟಣೆ

SHETTIGARA VAANI

# ಶೆಟ್ಟಿಗಾರ ವಾಣಿ

ಬೆಂಗಳೂರು ನಿವಾಸಿ ಕರಾವಳಿ ಮೂಲದ ಶೆಟ್ಟಿಗಾರ ಸಮಾಜದ ಮುಖವಾಣಿ

ಸಂಪುಟ: 1 ಫೆಬ್ರವರಿ 2025 ಸಂಚಿಕೆ: 8 ಪುಟಗಳು: 16

**ಸಂಪಾದಕ ಮಂಡಳಿ**
ಶ್ರೀ ನಾರಾಯಣ ಶೆಟ್ಟಿಗಾರ್
ಶ್ರೀ ಮಾಧವ ಶೆಟ್ಟಿಗಾರ್, ಯು
ಶ್ರೀ ಪ್ರಕಾಶಚಂದ್ರ ಆತ್ರಾಡಿ
ಶ್ರೀ ಪ್ರಭಾಕರ ಶೆಟ್ಟಿಗಾರ್, ಎಂ
ಶ್ರೀ ಮಾಧವ ಶೆಟ್ಟಿಗಾರ್, ಶೆಟ್ಟಿಗಾಡು
ಶ್ರೀ ಸುಂದರ ಎಸ್ ಶೆಟ್ಟಿಗಾರ್, ಎಕ್ಕಾರ್
ಶ್ರೀ ದೊಂಬಯ್ಯ ಶೆಟ್ಟಿಗಾರ್
ಶ್ರೀಮತಿ ಬಾನುಮತಿ ಡಿ ಶೆಟ್ಟಿಗಾರ್
ಸಿ.ಎ. ವಿಶ್ರಾಂತ್ ಬಿ ಎಲ್
ಶ್ರೀ ಯತೀಶ್ ಎಲ್. ಶೆಟ್ಟಿಗಾರ್
ಶ್ರೀಮತಿ ಉಷಾ ಚೇತನ್

**ವಿನ್ಯಾಸ ಮತ್ತು ತಂತ್ರಜ್ಞಾನ ನೆರವು**
ಶ್ರೀ ಯಶಸ್ವಿ ಜೆ
ಶ್ರೀ ರಾಮಕೃಷ್ಣ ಸಾಲಿಕೇರಿ

**ವಿಳಾಸ**
ಶೆಟ್ಟಿಗಾರವಾಣಿ, C/o ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ), ನಂ.8, ಶಾಂತವೇರಿ ಗೋಪಾಲಗೌಡ ನಗರ,
4ನೇ ಅಡ್ಡ ರಸ್ತೆ, ಮೂಡಲಪಾಳ್ಯ, ಬೆಂಗಳೂರು-560072
ಮೊಬೈಲ್: 9535443311
ಇಮೇಲ್: dkpadmashalibng@gmail.com
ವೆಬ್ ಸೈಟ್: www.dkpadmashalibng.in

ಸೂಚನೆ: ಇಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಆಯಾ ಲೇಖಕರ ವೈಯಕ್ತಿಕ ಅಭಿಪ್ರಾಯಗಳು ಮಾತ್ರ; ಪತ್ರಿಕೆಯ ಅಥವಾ ಕೂಟದ ಅಭಿಪ್ರಾಯಗಳಲ್ಲ.



AI generated image: No photo credits required

## ಸೋಣೆಯಾರತಿ ಹೂ ಮತ್ತು ಎರಡು ಜಡೆ

"ಸಾಯಂಕಾಲ ಪೂಜೆಗೆ ಬಾರದೇ ಬೆಳಿಗ್ಗೆ ಬತ್ರಿಯಲೇ ಮಕ್ಕಳೇ. ಹಾರಾಡಿ ಶಾಲೆ ಮಾಸ್ಟರ್ ತುಂಬಾ ಬರೆಯಲು ಕೊಡ್ತಾರಾ?" ಎಂದು ದೇವಸ್ಥಾನದ ಅರ್ಚಕ ಗಣಪಯ್ಯ ಸೋಮಯಾಜಿಯವರು ಕೇಳಿದಾಗ ಮಕ್ಕಳು "ಇಲ್ಲ, ಇಲ್ಲ. ಬೆಳಿಗ್ಗೆ ಬಂದ್ರೆ ಉಳಿದ ಹೂವೆಲ್ಲಾ ನಮ್ಗೆ ಕೊಡ್ತೀರಿ. ಪಂಚ ಕಜ್ಜಾಯವು ಸಿಗುತ್ತೆ" ಎಂದು ನಕ್ಕರು.

ಹಿರಿಯರಾದ ಗಣಪಯ್ಯ ಸೋಮಯಾಜಿಯವರಿಗೆ ಮಕ್ಕಳೆಂದರೆ ಬಹಳ ಪ್ರೀತಿ. ಆಗಾಗ ಅವರು ಹೂವು ಹಂಚುವಾಗ ಪುಟ್ಟ ಮಕ್ಕಳ ಜಡೆ ಲೆಕ್ಕ ಹಾಕುತ್ತಿದ್ದರು.

ಆ ದಿನ "ಇವಳು ಒಂದು ಜಡೆ, ಅವಳು ಎರಡು ಜಡೆ....ಎರಡು ಜಡೆಯವಳಿಗೆ ಸ್ವಲ್ಪ ಹೆಚ್ಚು, ಒಂದು ಜಡೆಗೆ ಕಡಿಮೆ, ಓಹೋ ಈ ಹುಡುಗಿಗೆ ಜಡೆಯೇ ಇಲ್ಲ. ಹುಡುಗರ ಕೂದಲು ಕತ್ತರಿಸಿದ ಹಾಗಿದೆ. ನಿನಗೆ ಹೂವು ಯಾಕೆ? ಕಿವಿಗೊಂದು ಸಿಕ್ಕಿಸು" ಎಂದು ಒಂದೇ ಒಂದು ಸೇವಂತಿಗೆ ಕೊಟ್ಟಾಗ ಪುಟ್ಟ ಸೀಮಾಳ ಕಣ್ಣಲ್ಲಿ ನೀರು. ಆ ಹುಡುಗಿಯನ್ನು ಕಂಡು ಉಳಿದ ಹೆಣ್ಮಕ್ಕಳ ಕಣ್ಣಲ್ಲೂ ನೀರು ಬಂದಿತ್ತು.

ಮಾರನೇ ದಿನವೂ ಸೀಮಾ ಉಳಿದ ಮಕ್ಕಳೊಂದಿಗೆ ಹೋಗಿದ್ದಳು. ಅವತ್ತು ಆಕೆಗೆ ಸಿಕ್ಕಿದ್ದು ಒಂದೇ ಹೂವು.

ಉಳಿದೆಲ್ಲ ಮಕ್ಕಳು ಎರಡೆರಡು ಜಡೆ ಹಾಕಿ ಬಂದಿದ್ದರು.
ಸೋಮಯಾಜಿಯವರು ಬಹಳ ಜಾಣ ಮಕ್ಕಳೆಂದು ನಕ್ಕಿದ್ದರು.
*****

ಅಂದು ಮಗಳನ್ನು ರಾಮ ಭಂಡಾರಿಯವರ ಸೆಲೂನಿಗೆ ಕರೆದೊಯ್ದು ಶಂಕರ ಎಂದಿನಂತೆ ಆಕೆಯ ಕೇಶವನ್ನು ಕತ್ತರಿಸಲು ಹೇಳಿದಾಗ ಆಕೆಯ ಕಣ್ಣಲ್ಲಿ ನೀರು.

ಅಪ್ಪನಿಗೆ ಆಶ್ಚರ್ಯ. "ಯಾಕೆ ಮಗಳೇ ಕಣ್ಣಿನಲ್ಲಿ ನೀರು?" ಎಂದಾಗ ಆ ಪುಟ್ಟ ಬಾಲೆ ಕಣ್ಣೊರಸಿಕೊಂಡು ನಕ್ಕಿದ್ದಳು.

ಅಷ್ಟರಲ್ಲಿ ಭಂಡಾರಿಯವರು "ನಂಗೆ ಗೊತ್ತಾಯಿತು. ನಿನ್ನೆ ದೇವಸ್ಥಾನದಲ್ಲಿ ಭಟ್ಟರು ಒಂದೇ ಹೂವು ಕೊಟ್ಟರೆಂದು ಕಣ್ಣಲ್ಲಿ ನೀರು ಹಾಕಿ ನಿಂತಿದ್ದಳು. ನಾನಲ್ಲೇ ಇದ್ದೆ. ಅಲ್ಲ ಮಾರಾಯ! ಶಂಕರ ಅವಳಿಗೂ ಜಡೆ ಹಾಕಬೇಕು, ಹೂ ಮುಡಿಯಬೇಕೆಂಬ ಆಸೆ ಇರಲ್ವಾ?" ಎಂದಾಗ

ಶಂಕರ ಶಪಥಗೈದವನಂತೆ ಮನೆಯತ್ತ ನಡೆದಿದ್ದ.

ಮುಂದಿನ ತಿಂಗಳಿನಿಂದಲೇ ಪುಟ್ಟ ಜಡೆ ಸೀಮಾಳಿಗೆ.

ಮಡಿದ ಸತಿಯನ್ನು ನೆನೆಯುತ್ತ ಮಗಳ ಕೇಶಕ್ಕೆ ಎಣ್ಣೆ ಸವರಿ ಜಡೆ ಹೆಣೆಯುವಾಗ ಅವನ ಕಣ್ಣಿಂದ ಎರಡು ಹನಿ ಕಣ್ಣೀರು ಜಾರಿ ಆಕೆಯ ಕೇಶದೊಡನೆ ಸೇರಿ ಹೋಗುತ್ತಿದ್ದದ್ದು ಇಬ್ಬರ ಗಮನಕ್ಕೂ ಬಂದಿಲ್ಲ. ನಾಲ್ಕು ವರ್ಷ ಕಳೆದಿದೆ. ಯಾರ ಮಾತಿಗೂ ಬಗ್ಗದ ಶಂಕರ ಎರಡನೇ ಮದುವೆಗೆ ಮುಂದಾಗಿಲ್ಲ.

ಸೀಮಾಳಿಗೆ ಐದನೇ ತರಗತಿ. ಸೋಣೆಯಾರತಿ ಹೂವು ಎರಡೂ ಜಡೆಯನ್ನು ಅಲಂಕರಿಸುತ್ತಿದೆ.

ಇದೀಗ ತಾನೇ ಜಡೆ ಹಾಕಿಕೊಳ್ಳುತ್ತಿದ್ದಾಳೆ ಸೀಮಾ.

****

ಶ್ರಾವಣ ಮಾಸ ಮತ್ತೆ ಬಂದಿದೆ. ತನ್ನ ಮಗಳಿಗೆ ಎರಡು ಜಡೆ ಹಾಕಿದ ಸೀಮಾ ತಾನೂ ಎರಡು ಜಡೆ ಹಾಕಿಕೊಂಡು ದೇವಸ್ಥಾನದ ಕಡೆಗೆ ಹೊರಟಾಗ ಅಪ್ಪ ಶಂಕರ ತನ್ನ ಅಳಿಯನತ್ತ ನೋಡಿ ನಕ್ಕಿದ್ದ.



ಶೋಭಾ ಹರಿಪ್ರಸಾದ
ಶೆಟ್ಟಿಗಾರ
ಉಡುಪಿ

# ಮದು – ವೇ

ಅಕ್ಕನ ಮದುವೆಯ ದಿಬ್ಬಣದಲ್ಲಿ ಬಂದವಳಾಕೆ ಮದುವೆಯೇ ಆಗದವಳು!
ಮದುವೆಯ ತುಂಬೆಲ್ಲಾ ಅವಳದೇ ಝೇಂಕಾರ!

ಪುಲಕವಿಟ್ಟಂತಿತ್ತು ಮಾರ್ದನಿಸುವ ಸಂಭ್ರಮವು!
ಸರಿ-ಸರಿಯುತವಳು ಮದುಮಗಳ ಅತ್ತ-ಇತ್ತ;
ಕುಣಿ-ಕುಣಿಯುತಲಿರುವ ತುರುಬ ಸುಳಿ ಸುಮ ವಿನ್ಯಾಸ ಮಾಲೆ ಲಾವಣ್ಯ ವೇಣಿ!

ತುಟಿ ಕೆಂಪ ತೋರಣ ಹುಚ್ಚು ನಗೆ ಕ್ಕಿಸ್ಸಕ್ಕೆಂದು;
ಉದುರುತಲಿರುವುದು ಮಾತು ಮುತ್ತು ಸರ್ರಕ್ಕೆಂದು
ಚೆಲ್ವ ಬೈತಲೆ ಸಡಿಲ ಮುಟ್ಟಿ-ಮುಟ್ಟಿ ಸೋತಿಹಳು ವೈಯಾರದ ಲಲನಾಮಣಿ!

ಅಂಗದೊಳ ಅಂಕದ ಅನಂಗ ಬಾಹುಳ್ಯವನ್ನು;
ಸಂಸ್ಕಾರವೆಂಬ ದುಪ್ಪಟ್ಟದಲ್ಲಿ ಹಿಡಿದಿಟ್ಟು
ಸ್ವಚ್ಛಂದದಲ್ಲಿ ಹರಿದಾಡುತಿರುವಳಾಕೆ! ಛೆ!
ಆಕೆಯದೋ ಹೊಯ್ದಾಟದ ತುಂಟ ದೃಷ್ಟಿ ಹಲವು ಬಗೆ!
ಬೇಕೇ ಬೇಕೆನಿಸದಿರದು ಇಲ್ಲಿ ಈಕೆಯ ಈ ಶೃಂಗಾರ?
ಅದ್ದೂರಿಯ ಅರಳು ನಡು ಗುಲಾಬಿ ಹೂವ ಗೊಂಚಲಲ್ಲಿ;
ಅಕ್ಕಪಕ್ಕದ ಪುಟ್ಟ ಹೂವ ಸರದಿ;
ನೋಡುಗರ ನೋಟ ಸೆರೆದಿಡುವ ಮಾಟ ಸುಖ ಕಾವ್ಯಮಯವೂ;
ಹಿಡದೆಸಳ ನೇಯ್ಗೆಯಲ್ಲಿ, ತನ್ನ ತಾನೇ ಮರೆತು ಸಾಲ ಪೋಣಿಸಿ ತಿರುವಳವಳು
ಶೃಂಗಾರವನ್ನೇ!

ನಡೆ ಮದುವೆಯ ಸುಖ ಸಂಭ್ರಮಕ್ಕೆ ಇದೇ ತನ್ನ -
ತ್ವರಿತ ಹಿತದ ಕೊಡುಗೆಯೆಂದು...
ಬೇಕೇ? ಬೇಕೆನಿಸದಿರದು ಇಲ್ಲಿ ಈ ಪರಿಯ ಶೃಂಗಾರ ವ್ಯವಹಾರವು?



AI generated image: No photo credits required

ಸುಮಧುರ ವಾದ್ಯ ಗೋಷ್ಠಿ ಮೇಳ ಮೇಳೈಸಿದರೂ,
ಮಲ್ಲಿಗೆಯ ಸುಗಂಧ ಉಸಿರು ಕಟ್ಟುವ ಕಂಪೇ ಆದರೂ;
ಆಸ್ವಾದಿಸುವ ಸು-ಮನ ಭಾವುಕ ಹೃದಯಗಳು ಇರಲೇಬೇಕು ಇಲ್ಲಿ!
ಸಾರ್ಥಕ್ಯ ಶೃಂಗಾರ ರಸ ಚರಣ ಹಾಡಲು;
ಮೈ-ಮನ ಆನಂದ ತುಂಬಿಕೊಳ್ಳಲು....



ಎಕ್ಕಾರ್ ಡಿ. ಪಿ. ಶೆಟ್ಟಿಗಾರ್
ಶೇಷಾದ್ರಿಪುರಂ, ಬೆಂಗಳೂರು

# ಕವಿತೆ ಕದ್ದವಳು

ನನಗೆ ಬರೆಯುವುದು ಎಂದರೆ ಬಹಳ ಪ್ರೀತಿ. ಅದರಲ್ಲೂ ಹನಿಗವನ ಎಂದರೆ ಇನ್ನಷ್ಟು ಪ್ರೀತಿ. ಹೀಗೆ ಬರೆದ ಹನಿಗವನಗಳನ್ನು ಪತ್ರಿಕೆಗಳಿಗೂ ಕಳಿಸುತ್ತಿದ್ದೆ. ಕೆಲವು ಪತ್ರಿಕೆಯವರು ಪ್ರಕಟಿಸಿದರು. ಕೆಲವು ವಿಷಾದದೊಂದಿಗೆ ವಾಪಾಸು ಬಂದವು.

ಹೀಗಿರುವಾಗ ಒಂದು ದಿನ ಸಂಪಾದಕರು ನನ್ನ ಅದ್ಭುತವಾದ ಹನಿಯನ್ನು, ನನ್ನ ಭಾವಚಿತ್ರ ಹಾಗೂ ವಿಳಾಸದೊಂದಿಗೆ ಪ್ರಕಟಿಸಿಯೇ ಬಿಟ್ಟರು. ನನಗೆ ತುಂಬಾ ಖುಷಿಯಾಯ್ತು. ಇದನ್ನು ಓದಿದ ಅದೆಷ್ಟು ಓದುಗರು ಕರೆ ಮಾಡಿ ಅಭಿನಂದಿಸಿದರು! “ನೀವು ಎಷ್ಟು ಸರಳವಾಗಿ ಬರೆಯುತ್ತೀರಿ, ಓದಿದ ನಮಗೂ ಹಾಗೆ ಬರೆಯಬಹುದಲ್ಲ ಅನಿಸಿತು” ಎಂದವರು ಹಲವರು. "ಬರೆಯುವುದು ಕಷ್ಟವಲ್ಲ. ತಿಳುವಳಿಕೆ ಇಲ್ಲದೆ ಬರೆಯುವುದು ಕಷ್ಟ" ಎಂದೆ.

ಅದೊಂದು ದಿನ ಕೆಲಸದ ವಿರಾಮದಲ್ಲಿ ಚಹಾ ಕುಡಿಯುತ್ತಾ ಇದ್ದೆ. ಒಂದು ಫೋನ್ ಕರೆ ಬಂತು. ಹೆಸರಿಲ್ಲ, ನಂಬರು. ಯಾರೋ ಓದುಗರು ಇರಬೇಕು ಅಂದ್ಕೊಂಡು ಕರೆಯನ್ನು ಕೈಗೆತ್ತಿಕೊಂಡೆ.

"ಹಲೋ...ಸರ್.... ನಾನು ಸುಪ್ರೀಯಾ ಅಂತ. ಮಂಗಳೂರಿನವಳು. ಅಂತಿಮ ವರ್ಷದ ಬಿ.ಎಸ್ಸಿ., ಓದುತ್ತಿದ್ದೇನೆ. ನಾನು ನಿಮ್ಮ ಹನಿಗವನ ಓದಿದೆ. ತುಂಬಾ ಸೊಗಸಾಗಿ ಬರೆದಿದ್ದೀರಾ. ಅಭಿನಂದನೆಗಳು ಸರ್..!!

ನಾನು ಧನ್ಯವಾದ ಹೇಳಿದೆ.

"ನಿತ್ಯದ ಘಟನೆಗಳನ್ನು ಹೆಕ್ಕಿ, ಎಷ್ಟು ಮನೋಜ್ಞವಾಗಿ, ಸರಳವಾಗಿ ಬರೆದಿದ್ದೀರಿ! ನಾನಂತೂ ನಿಮ್ಮ ಹನಿಗೆ ಸೋತು ಹೋದೆ!!... ಹಾಗೇ ಅದರಲ್ಲಿರುವ ಭಾವಚಿತ್ರ ಇತ್ತೀಚಿನದ್ದೆ.. ಸರ್?”

"ಹೌದು, ಏನಾಗಿದೆ?" ಎಂದೆ. “ಏನೂ ಆಗಿಲ್ಲ. ತುಂಬಾ ಮುದ್ದಾಗಿದೆ... ಸರ್”.

ಹಾಗೆ ಮಾತನ್ನು ಮುಂದುವರೆಸುತ್ತಾ, ಸಾಹಿತ್ಯ ವಿಚಾರವಾಗಿ ಹತ್ತು ನಿಮಿಷ ಮಾತನಾಡಿದಳು. ಹೀಗೇ ಮಾತನಾಡುತ್ತಾ, ಮಾತನಾಡುತ್ತಾ ಕೊನೆಯಲ್ಲಿ ಒಂದು ಮಾತು ಧೈರ್ಯದಿಂದ ಹೇಳಿ ಬಿಟ್ಟಳು: "ಸರ್., ನೀವು ಒಪ್ಪುವುದಾದರೆ ನಿಮ್ಮ ಬಾಳಸಂಗಾತಿ ಆಗುವ ಆಸೆ".

ತಲೆಯ ಮೇಲೆ ಪಂಕ ತಿರುಗುತ್ತಿದ್ದರೂ, ಮೈಯೆಲ್ಲ ಬೆವರಿತು. ಮೌನಕ್ಕೆ ಶರಣಾಗಿ, ಫೋನ್ ಇಟ್ಟೆ. ಮತ್ತೆ ಕರೆ ಮಾಡಿದಳು: "ಸರ್, ಸಂಜೆಯೊಳಗೆ ಉತ್ತರ ಹೇಳಿ”!?

"ಇದೇನು ಕನಸಾ?... ನನಗೆ ಮದುವೆಯಾಗಿ ಇನ್ನೂ ಒಂದು ವರ್ಷವೂ ಕಳೆದಿಲ್ಲ. ನನ್ನ ಶ್ರೀಮತಿಗೆ ಗೊತ್ತಾದರೆ ಏನಾದೀತು?" ನನ್ನ ತಲೆ ತಿರುಗಿತು. ಆದರೂ ಅಚಲನಾದೆ. ಕೆಲಸ ಮುಗಿಸಿ ಮನೆಗೆ ಬಂದೆ.

ನನ್ನ ಶ್ರೀಮತಿ ನನಗಾಗಿ ಕಾಯುತ್ತಿದ್ದಳು.

"ಯಾಕ್ರೀ ಎಷ್ಟೊಂದು ಸುಸ್ತಾದವರ ಹಾಗಿದ್ದೀರಿ? ... ತಲೆ ನೋಯುತ್ತಿದೆಯಾ? ಸರಿ, ಕಾಫಿ ತರ್ತೀನಿ” ಎಂದು ಒಳಗೆ ಹೋದಳು.

ನನಗೆ ಯಾಕಪ್ಪ ಬೇಕಿತ್ತು ಈ ಬರೆಯುವ ಹುಚ್ಚು. ಆ ಸಂಪಾದಕರು ನನ್ನ ಭಾವಚಿತ್ರ ಮತ್ತು ವಿಳಾಸ ಪ್ರಕಟಿಸಿದ್ದೇ ಇದಕ್ಕೆಲ್ಲ ಕಾರಣವಾಯ್ತು. ನನ್ನವಳ ಕಾಫಿ ಸವಿಯುತ್ತಾ, "ನೋಡು ಮಾರಾಯ್ತಿ, ಮೊನ್ನೆ ನನ್ನ ಹನಿಗವನ ಪ್ರಕಟವಾಗಿತ್ತಲ್ಲ? ಇಂದು ದಿನವಿಡೀ ಓದುಗರ ಅಭಿನಂದನೆಯ ಕರೆಗಳು. ಹಾಗಾಗಿ ಸುಸ್ತಾಗಿ ಬಿಟ್ಟೆ” ಎಂದೆ.

“ಹೌದಾ...! ಹಾಗಾದರೆ, ನಿಮ್ಮ ಹನಿಗವನದ ಬೇಡಿಕೆ ಹೆಚ್ಚಾಯ್ತು ಬಿಡಿ. ನನಗೂ ಸಂತೋಷ.”

"ನಿನಗೇನೊ ಸಂತೋಷವಾಯ್ತು ಬಿಡು. ನನಗೆ ಸಂತೋಷಕ್ಕಿಂತ ಆತಂಕ ಹೆಚ್ಚಾಗಿದೆ.” "ನೀವು ಹೇಳುತ್ತಿರುವುದು ಏನು?” ಅವಳು ನನ್ನ ಭುಜಕ್ಕೆ ಒರಗಿದಳು.

“ಇಂದು ಒಬ್ಬು ಯುವತಿ ಫೋನ್ ಕರೆ ಮಾಡಿದ್ದಳು? ಹೆಸರು ಸುಪ್ರೀಯಾ ಅಂತೆ. ನನಗೇನೂ ಪರಿಚಯ ಇಲ್ಲ ಅವಳದ್ದು? ನನ್ನ ಹನಿಗವನ ಮೆಚ್ಚಿದಳಂತೆ. ಹಾಗೆ ನನ್ನನ್ನು ಮೆಚ್ಚಿಕೊಂಡಳಂತೆ!” ಎನ್ನುವಾಗಲೇ... ಅವಳ ಫೋನ್ ಕರೆ ಮತ್ತೆ ಬಂತು. “ಸರಿ .. ನಾನೆ ಉತ್ತರಿಸುತ್ತೇನೆ” ಎಂದಳು ನನ್ನವಳು. “ಅವಳು ಕರೆ ಮಾಡಿದ್ದು ನನಗೆ. ನಾನೇ ಉತ್ತರಿಸುತ್ತೇನೆ” ಎಂದು ಫೋನ್ ಎತ್ತಿಕೊಂಡೆ.

"ಸರ್... ನಾನು ಸುಪ್ರೀಯಾ." “ಸರಿ. ಗೊತ್ತಾಗಿದೆ. ಏನಮ್ಮ, ಹೇಳು?” "ಸರ್... ತಮ್ಮ ಉತ್ತರದ ನಿರೀಕ್ಷೆಯಲ್ಲಿದ್ದೆ."

"ನೋಡಮ್ಮ... ನಾನೊಬ್ಬ ಹುಚ್ಚು ಬರಹಗಾರ. ನನಗೆ ಈಗಾಗ್ಲೇ ಮದುವೆಯಾಗಿ ಒಂದು ವರ್ಷನೂ ಕಳೆದಿಲ್ಲ. ಮತ್ತೆ ನಿನ್ನನ್ನು ಮದುವೆ ಮಾಡ್ಕೊಂಡು, ಇಬ್ಬರನ್ನೂ ಸಂಭಾಳಿಸುವ ಶಕ್ತಿ ನನಗಿಲ್ಲ. ಇಡಮ್ಮ ಫೋನು” ಎಂದು ಖಾರವಾಗಿ ಉತ್ತರಿಸಿ, ಕರೆಯನ್ನು ಕತ್ತರಿಸಿದೆ.

“ರೀ.. ಹೀಗಾ ಮಾತಾಡುವುದು? ಅವಳು ಹೆಣ್ಣು, ಏನೋ ಆಸೆಯಿಂದ ಕೇಳಿದಳು?. ಮುಳ್ಳನ್ನು ಮುಳ್ಳಿನಿಂದ ತೆಗೆಯಬೇಕು. ನಾಳೆ ನಿಮ್ಮ ಹೆಸರಿನಲ್ಲಿ ಅವಳು ಹೆಚ್ಚು ಕಡಿಮೆ ಮಾಡಿಕೊಂಡರೆ? ನಮ್ಮ ಪರಿಸ್ಥಿತಿ ಏನಾಗಬಹುದು? ನೀವು ಸೌಮ್ಯವಾಗಿ ಉತ್ತರ ನೀಡಬೇಕಿತ್ತು” ಎಂದಳು ನನ್ನವಳು. “ನೀನು ಈ ವಿಷಯದಲ್ಲಿ ಅಳುತ್ತೀಯಾ ಅಂದ್ಕೊಂಡೆ? ಗಂಡನಿಗೆ ದೃಢವಾಗಿ ನಿಂತು ಧೈರ್ಯ ತುಂಬಿದೆ. ಪರವಾಗಿಲ್ವೇ!!” ಎಂದೆ.

ಮತ್ತೆ ಅದೇ ಕರೆ ಬಂತು. "ಸರ್... ನೀವು ಮದುವೆಯಾದರೂ ಚಿಂತೆ ನನಗಿಲ್ಲ. ನಾನು ನಿಮ್ಮ ಪ್ರೀತಿ ಗೆದ್ದೇ ಗೆಲ್ಲುತ್ತೇನೆ!" ಪ್ರತಿಜ್ಞೆಯೊಂದಿಗೆ ಫೋನ್ ಇಟ್ಟಳು.

ನನಗೆ ದಿನದಿನವೂ ಭಯ ಆವರಿಸತೊಡಗಿತು. ನನ್ನ ಫೋನ್ ನಂಬರ್ ಬದಲಾಯಿಸಲೇ ಅಂದ್ಕೊಂಡೆ. ಆದರೆ ಆ ಪತ್ರಿಕೆಯಲ್ಲಿ ನನ್ನ ವಿಳಾಸ ಇದೆಯಲ್ಲ? ಅವಳು ಆ ವಿಳಾಸಕ್ಕೆ ಪತ್ರ ಬರೆದರೆ? ಅನುಮಾನದ ಹುತ್ತ ಬೆಳೆಯತೊಡಗಿತು. "ಏನಾದರೂ ಆಗಲಿ. ಬಂದದ್ದನ್ನು ಎದುರಿಸೋಣ” ಎಂದು ನನ್ನವಳು ನನಗೆ ಧೈರ್ಯ ತುಂಬಿದಳು. ಆದರೂ ಭಯದ ವಾತಾವರಣ ಹೃದಯ ಹೊಕ್ಕಿತ್ತು!

ಮತ್ತೆ ಒಂದು ವರ್ಷ ಅವಳ ಸುಳಿವಿಲ್ಲ. ನಾನು ನಿರಾಳನಾದೆ. ಒಂದು ದಿನ ಬೆಳಿಗ್ಗೆ ಒಂದು ಫೋನ್ ಕರೆ ಬಂತು. ಯಾವುದೇ ಗೊಂದಲವಿಲ್ಲದೆ ಕರೆ ಸ್ವೀಕರಿಸಿದೆ. "ಸರ್, ನಾನು ಸುಪ್ರೀಯಾ" ಎಂದಾಗ ನನ್ನ ಎದೆ ಧಸಕ್ಕೆಂದಿತು. ಅವಳ ಪ್ರತಿಜ್ಞೆ ಮರುಕಳಿಸಿತು. "ಸರ್... ನನಗೆ ಮದುವೆ ಫಿಕ್ಸ್ ಆಗಿದೆ. ಮೇ ೩ ರಂದು ಮದುವೆ. ನೀವು ದಂಪತಿ ಸಮೇತ ನನ್ನ ಮದುವೆಗೆ ಬರಬೇಕು. ಆಮಂತ್ರಣ ಪತ್ರಿಕೆ ನಿಮ್ಮ ವಿಳಾಸಕ್ಕೆ ಪೋಸ್ಟ್ ಮಾಡಿದೆ. ತಪ್ಪಿಸಬಾರದು. ಖಂಡಿತಾ ಬರಬೇಕು.” ಅವಳು ಪರಿಪರಿಯಾಗಿ ಆಹ್ವಾನ ನೀಡಿದಳು. ಈಗ ಸ್ವಲ್ಪ ಸಮಾಧಾನ ಆಯ್ತು. ಅಂತೂ ಅವಳಿಗೆ ಮದುವೆ ಫಿಕ್ಸ್ ಆಯ್ತಲ್ಲ. ಅಬ್ಬಾ..! ಈ ಉಸಾಬರಿ ತಪ್ಪಿತು. ಆದರೆ ಒಂದು ಅನುಮಾನ.... ನಾನು ಮದುವೆಗೆ ಹೋದರೆ, ಅವಳು ಅಲ್ಲಿ ಏನಾದರೂ ಹೆಚ್ಚು ಕಡಿಮೆ ಮಾಡಿದರೆ? ನಮ್ಮ ಮರ್ಯಾದೆ ಏನಾಗಬಹುದು? ಬೇಡ, ಮದುವೆಗೆ ಹೋಗುವುದೇ ಬೇಡ. ಅವಳ ಪ್ರತಿಜ್ಞೆ ಮತ್ತೆ ಕಾಡಿತು.

"ಮಳೆ ನಿಂತರೂ ಮರದ ಹನಿ ನಿಲ್ಲದು" ಎಂಬಂತೆ ಒಂದು ವರ್ಷ ಉರುಳಿತು. ಅದೇ ಧ್ವನಿ, ಅದೇ ಹೆಸರು. ನಾನು ಮತ್ತೆ ಆತಂಕಗೊಂಡೆ! "ಮದುವೆಯಾದರೂ ಬಿಡಲಾರಳು, ಏನು ಕಥೆ ಇದು?" ಎನ್ನುತ್ತಿರುವಾಗ, "ಸರ್..ನನಗೆ ಗಂಡು ಮಗುವಾಗಿದೆ. ನೀವಂತೂ ನನ್ನ ಮದುವೆಗೆ ಬರಲಿಲ್ಲ. ಮಗುವಿನ ನಾಮಕರಣಕ್ಕಾದರೂ ಬನ್ನಿ. ನೀವು ಮರೆತರೂ

ನಾನಂತೂ ನಿಮ್ಮನ್ನು ಮರೆಯಲಾರೆ! ನೀವು ಬರಬೇಕೆಂಬುದು ನನ್ನ ಅಭಿಲಾಷೆ. ನೀವೇ ಒಂದು ದಿನಾಂಕ ನಿಗದಿ ಮಾಡಿ ಹೇಳಿ. ಅದೇ ದಿನ ಮಗುವಿಗೆ ನಾಮಕರಣ ಮಾಡೋಣ. ನಾನು ನನ್ನ ಪತಿಯಲ್ಲಿ ನಿಮ್ಮ ವಿಚಾರವನ್ನೆಲ್ಲ ಹೇಳಿದೆ? ನಿಮ್ಮನ್ನು ಅವರು ತುಂಬಾ ಮೆಚ್ಚಿಕೊಂಡಿದ್ದಾರೆ. ಅವರು ಸಹ ನಿಮ್ಮನ್ನು ಆಹ್ವಾನಿಸಿದ್ದಾರೆ?" ಅವಳು ಹೇಳುತ್ತಲೇ ಇದ್ದಳು.

"ಬೇಡ, ಬೇಡ. ನಿಮ್ಮ ದಿನಾಂಕವೇ ಇರಲಿ. ಖಂಡಿತ ಬರುತ್ತೇನೆ. ಮಿಸ್ ಮಾಡಲ್ಲ" ಎಂದು ಭರವಸೆ ಕೊಟ್ಟೆ. ಇನ್ನೇನು ಭಯ? ಅವಳು ಗಂಡನ ನಿರ್ಧಾರವನ್ನು ವ್ಯಕ್ತಪಡಿಸಿದ್ದಾಳೆ. ಸರಿ ಎಂದು ಕಳೆದ ವರ್ಷ ಅಗಸ್ಟ್ ೪ ರಂದು, ನಮ್ಮ ರಥವನ್ನೇರಿ ಮಂಗಳೂರಿಗೆ ಹೊರಟೆವು. ಮಳೆ ಬೇರೆ. ದಾರಿ ಮಧ್ಯೆ ಆಗಾಗ ಅವಳ ಫೋನ್ ಕರೆಗಳು. ಅವಳಿಗೆ ನಾವು ಬರುತ್ತಿರುವುದು ಖಾತ್ರಿ ಆಯ್ತು. ಅವಳು ಕೊಟ್ಟ ವಿಳಾಸ ಹುಡುಕಿಕೊಂಡು ಹೋಗುವುದು ಸ್ವಲ್ಪ ತಡವಾಯ್ತು."

ನಮ್ಮ ಕಾರು ಅವಳ ಮನೆಯ ಮುಂದೆ ನಿಲ್ಲುತ್ತಿದ್ದಂತೆ ಓಡಿ ಬಂದು, "ಸರ್, ನಾನೇ ಸುಪ್ರೀಯಾ. ಬನ್ನಿ ಸರ್" ಎಂದು ಕಾಲು ತೊಳೆಯಲು ನೀರು ಕೊಟ್ಟಳು. ಅಬ್ಬಾ..!! ಮನೆ ಎಂದರೆ ಅರಮನೆ. ಮನೆಯ ಮುಂದೆ ಹತ್ತಾರು ಕಾರುಗಳು! ಇಷ್ಟೊಂದು ದೊಡ್ಡ ಮನೆತನದ ಹುಡುಗಿ ನನ್ನ ಹನಿಗವನಕ್ಕೆ ಮೆಚ್ಚಿದ್ದಾಳೆಂದರೆ ಎಂಥ ವಿಪರ್ಯಾಸ! ಇದರಲ್ಲಿ ನಮ್ಮ ಋಣಾನುಬಂಧವಿರಲೇ ಬೇಕು ಎಂದೆನಿಸಿತು ನನಗೆ.

“ಸರ್, ನಿಮ್ಮನ್ನು ಪ್ರತ್ಯಕ್ಷವಾಗಿ ನೋಡುತ್ತೇನೆ ಎಂದೆನಿಸಲಿಲ್ಲ. ಆದರೂ ನನ್ನ ಆಹ್ವಾನಕ್ಕೆ ಗೌರವ ಕೊಟ್ಟು ಬಂದಿರಲ್ಲ, ಅದು ನನ್ನ ಸೌಭಾಗ್ಯ ಹಾಗೂ ಸಂತೋಷ.”

ಮನೆಯವರಿಗೆಲ್ಲ ನನ್ನ ಪರಿಚಯ ಮಾಡಿಸಿ, “ಇವರು ಒಬ್ಬ ಸಾಹಿತಿ” ಎಂದಾಗ, ನನಗೆ ಒಂಥರಾ ಮುಜುಗರ! “ನಾನೇನು ಅಂಥ ಕವಿಯಲ್ಲ. ಬಿಡುವಿನ ವೇಳೆಯಲ್ಲಿ ಬರೆಯುವುದು ನನ್ನ ಅಭ್ಯಾಸ, ಅಷ್ಟೇ” ಎಂದೆ. "ಆದರೂ ಸುಂದರವಾಗಿ ಬರೆಯುತ್ತೀರಿ" ಎಂದು ಅಂದು ಪ್ರಕಟವಾದ ಹನಿಗವನದ ಪತ್ರಿಕೆಯನ್ನು ತಂದು ಎಲ್ಲರ ಮುಂದೆ ಓದಿದಾಗ, ಅಲ್ಲಿದ್ದವರು ನಕ್ಕು, ನನಗೆ ಗೌರವ ತಂದುಕೊಟ್ಟರು. ಎಲ್ಲರಿಗೂ ಧನ್ಯವಾದ ಹೇಳಿದೆ.

"ಸರಿ. ಸರ್... ನೋಡಿ, ನನ್ನ ಮಗು" ಎಂದು ಮಗುವನ್ನು ನನ್ನವಳ ಕೈಗೆ ಕೊಟ್ಟಳು. "ಮಗು ತುಂಬಾ ಮುದ್ದಾಗಿದೆ" ಎನ್ನುತ್ತಾ ಮಗುವಿನ ಕೈಯಲ್ಲಿ ೫೦೦ ರೂ ಇಟ್ಟೆ. "ಇದೆಲ್ಲ ಯಾಕೆ ಸರ್" ಎಂದಳು ಅವಳು. "ಇದು ಒಂದು ಮರ್ಯಾದೆ" ಅಂದೆ. "ಸರ್, ನನ್ನ ಮಗುವಿನ ಬಗ್ಗೆ ಹನಿಗವನ ಹೇಳಿರಿ." ಅವಳ ಒತ್ತಾಯ.

ಅಲ್ಲಿ ಬಂದ ಹೆಂಗಸರೆಲ್ಲ ಮಗುವನ್ನು ಹೊಗಳುವುದು, ನನಗೆ ಕೇಳಿದ್ದು ಹೀಗೆ:

ಮಗು ಎಷ್ಟು ಮುದ್ದಾಗಿದೆ.
ಕಣ್ಣು, ಮೂಗು, ಬಾಯಿ, ಹಣೆ
ಎಲ್ಲವೂ ಅವನ ಅಪ್ಪನಂತೆ!
ಹೌದು, ಅವರ ಮಗು ಅವರಂತೆ.
ಬಂದವರಿಗೆ ಯಾಕೆ ಚಿಂತೆ?

ಹೀಗೆ ಬರೆದೆ.ಊಟ ಆಯ್ತು. ಅಲ್ಲಿಂದ ಹೊರಟೆವು. "ಸರ್ ನಿಲ್ಲಿ. ಇಂದು ರಕ್ಷಾ ಬಂಧನ. ನೀವು ನನ್ನ ಸರ್ ಅಲ್ಲ. ಇನ್ಮೇಲೆ ನನ್ನ ಅಣ್ಣ. ಅಂತೂ ನನ್ನ ಮೇಲಿನ ಪ್ರೀತಿಗೆ ಮನೆಗೆ ಬಂದಿದ್ದೀರಿ. ನನಗೂ ತುಂಬಾ ಹೆಮ್ಮೆ. ನಿಮ್ಮ ಪ್ರೀತಿ ಗೆಲ್ಲಬೇಕು ಎಂಬುದು ನನ್ನ ಹಠವಾಗಿತ್ತು. ಕೊನೆಗೂ ಅದು ಫಲಿಸಿತು. ನಮ್ಮ ಋಣಾನುಬಂಧದಲ್ಲಿ ಅಣ್ಣ ತಂಗಿಯಾಗಿರಲು ಇಷ್ಟೆಲ್ಲಾ ನಡೆದು ಹೋಯ್ತು" ಎಂದು ಆರತಿ ಬೆಳಗಿ, ಕೈಗೆ ರಕ್ಷೆ ಕಟ್ಟಿದಳು. ಆರತಿ ತಟ್ಟೆಯಲ್ಲಿ ೧೦೦ ರೂ ಇಡುವಾಗ ನನ್ನ ಕಣ್ಣು ತೇವವಾಯ್ತು. ಅವಳು ನನ್ನನ್ನು ಆಲಂಗಿಸಿಕೊಂಡು ಹಣೆಗೆ ಮುತ್ತು ಸುರಿದಳು. ನನ್ನವಳ ಕಣ್ಣಲ್ಲಿ ನೀರು ಸುರಿಯಿತು.

ಈಗ ಅವಳು ನಮ್ಮ ಮನೆಯ ಸದಸ್ಯೆಯಂತೆ ನಮ್ಮ ಆತ್ಮೀಯಳಾಗಿ ಸದಾ ನಮ್ಮೊಡನೆ ಮಾತಾಡುತ್ತಾ ಇದ್ದಾಳೆ.



ಜಗದೀಶರಾಂ ಶೆಟ್ಟಿಗಾರ್ ಜಪ್ತಿ
ಕುಂದಾಪುರ



AI generated image: No photo credits required



# ಸಂಪಾದಕ ವಾಣಿ

## ನಾರಾಯಣ ಶೆಟ್ಟಿಗಾರ್

ಈ ಪ್ರಪಂಚದಲ್ಲಿ ಯಾವುದೋ ಒಂದು ಚಾಲಕಶಕ್ತಿ ಇದೆ ಎನ್ನುವುದು ಎಲ್ಲರೂ ನಂಬುವ ವಿಷಯ. ಈ ಶಕ್ತಿಯ ಮೂಲವೇ ದೇವರು ಎನ್ನಬಹುದು. ಆ ಶಕ್ತಿಗೆ ಮನುಷ್ಯರು ಬೇರೆ ಬೇರೆ ಹೆಸರು, ರೂಪ, ಗುಣಗಳನ್ನು ಕಲ್ಪಿಸಿಕೊಂಡ ಕಾರಣ ನಿರಾಕಾರನಾದ ಭಗವಂತನು ವಿಶ್ವಾದ್ಯಂತ ಬಹುರೂಪಿಯಾಗಿ ಕಾಣಿಸಿಕೊಳ್ಳುತ್ತಾನೆ. ದೇವರು ಸೃಷ್ಟಿಕರ್ತನೂ, ಜಗತ್ತಿನ ಮೂಲಪುರುಷನೂ ಆಗಿದ್ದು ಆದಿ ಅಂತ್ಯಗಳಿಲ್ಲದ ಅಪರಿಮಿತ ಗುಣ ಸಂಪನ್ನನೂ ಶಕ್ತಿ ಸಂಪನ್ನನೂ, ಕರುಣಾಮಯಿಯೂ ಆಗಿದ್ದು ರೂಪರಹಿತನಾಗಿದ್ದರೂ ಸರ್ವರೂಪಗಳಲ್ಲಿಯೂ ಕಾಣಿಸಿಕೊಳ್ಳುತ್ತಾನೆ.

ದೇವರ ಮೂರು ಮುಖ್ಯ ಕೆಲಸಗಳು ಸೃಷ್ಟಿ , ಸ್ಥಿತಿ ಮತ್ತು ಲಯಗಳೆಂದು ನಾವು ನಂಬುತ್ತೇವೆ. ಈ ಮೂರು ಕ್ರಿಯೆಗಳು ಪ್ರಾಣಿ, ಪಕ್ಷಿ, ಕ್ರಿಮಿ, ಕೀಟ ಮತ್ತು ಸಸ್ಯಗಳಲ್ಲಿಯೂ ನಡೆಯುವ ಸಾಮಾನ್ಯ ವಿದ್ಯಮಾನವಾಗಿದೆ. ಈ ಕ್ರಿಯೆಗಳಿಗೆ ಅಧಿಪತಿಗಳಾಗಿ ಬ್ರಹ್ಮ , ವಿಷ್ಣು , ಮಹೇಶ್ವರ ಎಂಬ ರೂಪ ನೀಡಿ ಅವರನ್ನು ತ್ರಿಮೂರ್ತಿಗಳೆಂದು ಕರೆಯುತ್ತೇವೆ. ಅವರವರ ನಂಬಿಕೆಗಳಿಗೆ ಅನುಗುಣವಾಗಿ ಜನರು ದೇವರನ್ನು ಬಹುರೂಪಗಳಲ್ಲಿ ನೋಡತೊಡಗಿದರು.

ಆಸ್ತಿಕನಾದವನು ದೇವರು ಇದ್ದಾನೆ ಎಂದರೆ ನಾಸ್ತಿಕ ದೇವರು ಇಲ್ಲ ಎಂದೇ ಹೇಳುತ್ತಾನೆ. ಯಾವುದೇ ವಸ್ತು ಇಲ್ಲ ಎನ್ನಬೇಕಾದರೆ ಆ ವಸ್ತುವಿನ ಬಗ್ಗೆ ಏನೋ ಒಂದು ಕಲ್ಪನೆ ಇರಬೇಕಲ್ಲವೆ? ಇಲ್ಲಿ ಪುಸ್ತಕ ಇಲ್ಲ ಎಂದು ಹೇಳಬೇಕಾದರೆ ಹಾಗೆ ಹೇಳುವವನಿಗೆ ಪುಸ್ತಕ ಎಂದರೆ ಏನು ಎಂಬುದು ತಿಳಿದಿರಬೇಕಲ್ಲವೆ? ಅಂದರೆ ನಾಸ್ತಿಕನಿಗೂ ದೇವರ ಕುರಿತು ಪರೋಕ್ಷವಾಗಿ ಒಂದು ಕಲ್ಪನೆ ಇರಬಹುದಲ್ಲವೆ? ನಾಸ್ತಿಕ ಎಂಬ ಶಬ್ದದೊಳಗೂ ಆಸ್ತಿಕ ಇದ್ದೇ ಇರುತ್ತಾನೆ. ಆಸ್ತಿಕತೆಯ ಅಸ್ತಿತ್ವವನ್ನು ಅಲ್ಲಗಳೆಯುವವನೇ ನಾಸ್ತಿಕನೆನಿಸಿಕೊಳ್ಳುತ್ತಾನೆ.

ಸಂಕಟ ಬಂದಾಗ ವೆಂಕಟರಮಣ ಎನ್ನುವಂತೆ ನಮ್ಮ ಕಷ್ಟಕಾಲದಲ್ಲಿ ಮೊದಲು ನೆನಪಾಗುವುದು ದೇವರು. ದೇವರ ಕಲ್ಪನೆ ನಮಗೆ ಧೈರ್ಯ ತುಂಬುತ್ತದೆ. ಅನಾಥಪ್ರಜ್ಞೆಯನ್ನು ದೂರವಾಗಿಸುತ್ತದೆ. ದೇವರ ಬಗ್ಗೆ ಪ್ರವಚನ ನೀಡುವುದು ನನ್ನ ಉದ್ದೇಶವಲ್ಲ. ಆದರೆ ನಂಬುವವರಿಗೆ ದೇವರು ಇದ್ದೇ ಇರುತ್ತಾನೆ ಎನ್ನುವುದು ದೃಢನಂಬಿಕೆ.

***

ನೋಡನೋಡುತ್ತಲೇ ನಮ್ಮ ಎಂಟು ಸಂಚಿಕೆಗಳು ಬೆಳಕು ಕಂಡವು. ಓದುಗರ ಪ್ರೋತ್ಸಾಹದೊಂದಿಗೆ ನಮ್ಮ ಲೇಖಕರ ಬಳಗವೂ ವಿಸ್ತಾರ ಹೊಂದಿದೆ. ಹಳೆಬೇರು ಹೊಸ ಚಿಗುರು ಕೂಡಿರಲು ಮರ ಸೊಗಸು ಎಂಬಂತೆ ನುರಿತ ಬರಹಗಾರರೊಂದಿಗೆ ಹೊಸ ಪ್ರತಿಭೆಗಳ ಕೃತಿಗಳು ಪತ್ರಿಕೆಯನ್ನು ಅಂದಗೊಳಿಸುತ್ತಿವೆ. ಹೊಸ ಲೇಖಕರ ಸಂಖ್ಯೆ ಹೆಚ್ಚುತ್ತಿದ್ದರೂ, ಇನ್ನೂ ಬಹಳ ಮಂದಿ ಎಲೆಮರೆಯ ಕಾಯಿಗಳಾಗಿಯೇ ಉಳಿದುಕೊಂಡಿದ್ದಾರೆ ಎನ್ನುವುದಂತೂ ಸತ್ಯ. ಓದುಗರ ಪ್ರತಿಕ್ರಿಯೆಗಳು ಬರಹಗಾರರ ಉತ್ಸಾಹ ಹೆಚ್ಚಿಸುತ್ತವೆ ಎನ್ನುವುದೂ ಸತ್ಯ. ಎಲ್ಲಾ ರೀತಿಯ ಬರಹಗಳ ನಿರೀಕ್ಷೆ ನಮ್ಮದು.

# ನಾವಿನ್ನೂ ಮನುಷ್ಯತ್ವ ಸಿದ್ಧಿಸಿಲ್ಲ

ಬೈಬಲ್ ನ ಕಥೆಯೊಂದರಲ್ಲಿ, ಒಂದು ಜನಸಮೂಹ ಅನೈತಿಕ ಸಂಬಂಧ ಹೊಂದಿದ ಆಪಾದನೆ ಹೊತ್ತ ಮಹಿಳೆಯನ್ನು ಕಲ್ಲು ಹೊಡೆದು ಸಾಯಿಸಲೆಂದು ಅಟ್ಟಿಸಿಕೊಂಡು ಹೋಗುತ್ತಿದ್ದಾಗ, ಯೇಸು ಕ್ರಿಸ್ತ ಅವರನ್ನು ತಡೆದು ನಿಲ್ಲಿಸಿ, 'ನಿಮ್ಮಲ್ಲಿ ಯಾರು ಇಲ್ಲಿಯವರೆಗೆ ಏನೂ ಪಾಪ ಮಾಡಿಲ್ಲವೋ, ಅವರು ಆಕೆಗೆ ಮೊದಲ ಕಲ್ಲನ್ನು ಹೊಡೆಯಿರಿ' ಎಂದಾಗ



AI generated image: No photo credits required

ಅವರು ತಮ್ಮ ಕೈಯಲ್ಲಿದ್ದ ಕಲ್ಲುಗಳನ್ನು ಬಿಸಾಡಿ ಬಾಯಿ ಮುಚ್ಚಿಕೊಂಡು ಹಿಂದಿರುಗುತ್ತಾರೆ. ಇದು, ಮನುಷ್ಯ ಲೋಕದಲ್ಲಿ ನಡೆಯುವ ಹೆಚ್ಚಿನ ಪೈಶಾಚಿಕ ಕೃತ್ಯಗಳು ಸಾರ್ವಜನಿಕಗೊಂಡಾಗ ನಮ್ಮಲ್ಲಿನ ಬಹುಮಂದಿ 'ಸಚ್ಚಾರಿತ್ರ್ಯರು' ನಡೆದುಕೊಳ್ಳುವ ರೀತಿಗೆ ಅನ್ವಯಿಸುತ್ತದೆ. ಇದು, ಕೇವಲ ಬೂಟಾಟಿಕೆಯಲ್ಲದೆ ಮತ್ತೇನಿಲ್ಲ.

ಹಾಗಿದ್ದಲ್ಲಿ, ಇನ್ನೊಬ್ಬರಿಗೆ ಬೆರಳು ತೋರಿಸುವ ಹಕ್ಕು ನಮಗಿಲ್ಲವೇ? ಎನ್ನುವ ಪ್ರಶ್ನೆಗೆ ಉತ್ತರವೆಂದರೆ, ಖಂಡಿತವಾಗಿಯೂ ಇದೆ, ಆದರೆ ನಾವು ಅಂತಹ ಸಚ್ಚಾರಿತ್ರ್ಯವನ್ನು ಬೆಳೆಸಿಕೊಂಡಾಗ ಮಾತ್ರ. ಹಾಗಿದ್ದಲ್ಲಿ, ಯಾವುದು ಸರಿ, ಯಾವುದು ತಪ್ಪು ಎಂದು ಗುರುತಿಸಿ ಅದರಂತೆ ನಡೆದುಕೊಳ್ಳುವ ಮಾನದಂಡಗಳೇನು? ತಪ್ಪು ಮಾಡುವ ಮನುಷ್ಯನಿಗೆ ಕ್ಷಮೆ ನೀಡಬೇಕೇ ಅಥವಾ ಕಠಿಣ ಶಿಕ್ಷೆ ನೀಡಬೇಕೇ? ಮನುಷ್ಯ ಮಾಡುವ ತಪ್ಪುಗಳಿಗೆ ಕೇವಲ ಆ ಮನುಷ್ಯ ಮಾತ್ರ ವಾರಸುದಾರನೇ, ತಪ್ಪುಗಳನ್ನು ಸಹಜ ಪ್ರವೃತ್ತಿಯನ್ನಾಗಿಸಿರುವ ಒಂದು ಕೆಟ್ಟ ಸಮಾಜವನ್ನು ಪೋಷಿಸುತ್ತಿರುವ, ನಿರ್ಮಿಸುತ್ತಿರುವ ನಾವೆಲ್ಲಾ ಅಷ್ಟೇ ಹೊಣೆಗಾರರಲ್ಲವೇ? ಒಂದು ವೇಳೆ, ವ್ಯಕ್ತಿಯನ್ನು ಶಿಕ್ಷಿಸುವುದಾದರೆ, ಎಂತಹ ಶಿಕ್ಷೆ ನೀಡುವುದು ಸೂಕ್ತ? ಮನುಷ್ಯನಿಗೆ ತಾನು ಮಾಡುತ್ತಿರುವುದು ತಪ್ಪು ಎಂದು ಗೊತ್ತಿದ್ದರೂ ಪುನಃ ಪುನಃ ಅದೇ ತಪ್ಪನ್ನು ಯಾಕೆ ಮಾಡುತ್ತಿರುತ್ತಾನೆ? ತನ್ನನ್ನು ತಿದ್ದಿಕೊಳ್ಳುವುದು ಅಷ್ಟೊಂದು ಕಠಿಣವೇ?...

ಈ ಪ್ರಶ್ನೆಗಳಿಗೆ ಉತ್ತರ ಹುಡುಕುವಲ್ಲಿ ನಮಗೆ ತಕ್ಕಮಟ್ಟಿಗೆ ಸ್ಪಷ್ಟತೆ ನೀಡುವ ಕಥೆಯೆಂದರೆ, ಮಹಾಭಾರತದಲ್ಲಿ ಪ್ರಸ್ತಾಪವಾಗಿರುವ ಶಿಬಿ ಚಕ್ರವರ್ತಿಯದ್ದು. ಇಲ್ಲಿರುವ ಗಿಡುಗ ಮತ್ತು ಪಾರಿವಾಳದ ಕಥೆಯಲ್ಲಿ ಮನುಷ್ಯ ನಿರ್ಮಿತ ನಾಗರೀಕ ಪ್ರಪಂಚ ಮತ್ತು ಅನ್ಯಜೀವಿಗಳ ಪ್ರಪಂಚದ ನಡುವೆ ಇರುವ ಪ್ರಮುಖ ವ್ಯತ್ಯಾಸವನ್ನು ಚರ್ಚಿಸಲಾಗಿದೆ. ಅರಣ್ಯ ನ್ಯಾಯದಂತೆ, ಪ್ರಾಣಿಗಳ ಜಗತ್ತಿನಲ್ಲಿ ಹಸಿವು ಮತ್ತು ಕಾಮತೃಷೆಗಾಗಿ ನಿರ್ದಾಕ್ಷಿಣ್ಯದ ಜಿದ್ದಾಟ, ಕ್ರೌರ್ಯ, ಹಿಂಸೆ, ಸಾವು ನಡೆಯುತ್ತದೆ. ಇಲ್ಲಿ, ದೈಹಿಕ ಬಲ ಪ್ರದರ್ಶನದ ಮೂಲಕ ದುರ್ಬಲ ಜೀವಿಗಳನ್ನು ಬೆದರಿಸಿ ತನ್ನ ಮೇಲುಗೈ ಸಾಧಿಸುವುದು ಸಹಜ ನಡವಳಿಕೆ. ಆದ್ದರಿಂದಲೇ, ಅರಿವಿನ ಪ್ರಪಂಚಕ್ಕೆ ತೆರೆದುಕೊಂಡ ಮನುಷ್ಯ, ಕಾಡಿನಲ್ಲಿರುವ ಕ್ರೌರ್ಯ, ಶೋಷಣೆ, ದೈನಂದಿನ ಜೀವನ ನಿರ್ವಹಣೆಯಲ್ಲಿಯೇ ಕಳೆದುಹೋಗುವ ಬದುಕು, ಇತ್ಯಾದಿಗಳಿಂದ ಭಿನ್ನವಾದ ಉದಾತ್ತ ಜೀವನ ದೃಷ್ಟಿಯ ನಾಗರೀಕ ಪ್ರಪಂಚ ಕಟ್ಟಿಕೊಳ್ಳುವ ಮಹದಾಸೆಯಿಂದ ಕಾಡಿನಿಂದ ಹೊರಬಂದು ತನ್ನ ಕನಸಿನ ನಾಡನ್ನು ಕಟ್ಟಿಕೊಂಡ. ಈ ಆದರ್ಶ ಪ್ರಪಂಚದಲ್ಲಿ ಶೋಷಣೆಗೆ ಬದಲಾಗಿ ಸಹಜೀವಿಗಳೊಂದಿಗಿನ ಸಹಾನುಭೂತಿಯ ಬದುಕು ಸಾರ್ಥಕವೆನಿಸಿತು. ಆದರೆ, ಪ್ರಾಣಿಗಳಿಂದ ವಿಕಸಿತನಾಗುತ್ತಾ ಬಂದ ಮನುಷ್ಯನಿಗೆ ತನ್ನೊಳಗೆ ಇನ್ನೂ ಸುಪ್ತವಾಗಿರುವ 'ಮೃಗೀಯ' ಪ್ರವೃತ್ತಿಯನ್ನು ಸಂಪೂರ್ಣವಾಗಿ ಮೀರಿ ಆದರ್ಶಪ್ರಾಯವಾದ 'ಮನುಷ್ಯತ್ವ' ಸ್ಥಿತಿಯನ್ನು ತಲುಪಲು ಇನ್ನೂ ಸಾಧ್ಯವಾಗಿಲ್ಲವೆನಿಸುತ್ತದೆ. ಈ ಅಸಹಾಯಕತೆಯ ಫಲವಾಗಿ, ತನ್ನಲ್ಲಿರುವ ಮೃಗೀಯ ಪ್ರವೃತ್ತಿ ಸಾರ್ವಜನಿಕಗೊಳಿಸಿದಂತೆ ತನ್ನನ್ನು ನಿಗ್ರಹಿಸಲೆಂದು, ತಾನು ಸೃಷ್ಟಿಸಿದ ನಾಗರೀಕ ಸಮಾಜದಲ್ಲಿ ಕಾನೂನು ವ್ಯವಸ್ಥೆಯ ಸಹಾಯ ಪಡೆದನೆನ್ನಬಹುದು. ಆದರೆ, ಈ ಸಂಸ್ಥೆಗಳು ನಾನಾ ಕಾರಣಗಳಿಂದ ನಿಯಂತ್ರಿಸಲು ವಿಫಲವಾಗಿರುವುದರಿಂದ, ಮನುಷ್ಯ ಲೋಕದಲ್ಲಿ ಮೃಗೀಯ ಗುಣಗಳು ಇನ್ನೂ ತಮ್ಮ ನೆಲೆ ಉಳಿಸಿಕೊಂಡಿವೆ. ವರ್ತಮಾನದ ಕರ್ನಾಟಕದಲ್ಲಿ ಬಹಳ ಚರ್ಚೆಯಲ್ಲಿರುವ ತೋಳ್ಬಲ, ಹಣಬಲ ಮತ್ತು ಪ್ರಭಾವದ ಫಲವಾದ ಮನುಷ್ಯನ ಕ್ರೌರ್ಯ ಪ್ರಕರಣಗಳು ಇದನ್ನೇ ಸಾಬೀತು ಪಡಿಸುತ್ತವೆ.

ಮೃಗೀಯ ಪ್ರವೃತ್ತಿಯಿಂದ ಮನುಷ್ಯತ್ವಕ್ಕೆ ಏರುವ ದಾರಿ ಅಷ್ಟು ಸುಲಭವಾಗಿಲ್ಲ. ಇಂದಿಗೂ ಕೂಡ ಮೃಗತ್ವದಿಂದ ಮನುಷ್ಯತ್ವದತ್ತ ಮನುಷ್ಯನ ಪಯಣ ಗುರಿಮುಟ್ಟದೇ ಅಪೂರ್ಣವಾಗಿಯೇ ಉಳಿದಿದೆ. ಇದನ್ನು, ಬುದ್ಧ ಬಹಳ ಚೆನ್ನಾಗಿ ಅರ್ಥ ಮಾಡಿಕೊಂಡು ಪರಿಪೂರ್ಣತೆಯತ್ತ ಸಾಗಿದ. ಅವನ ಹುಡುಕಾಟದ ಫಲವಾಗಿ ಕಂಡುಕೊಂಡ ಜೀವನ ಸತ್ಯವೆಂದರೆ, ಮೃಗೀಯ ಗುಣಗಳಿಂದ ಬಿಡುಗಡೆ ಪಡೆಯುತ್ತಾ ಕಾರುಣ್ಯದಿಂದ ಕೂಡಿದ ಮನುಷ್ಯತ್ವವನ್ನು ಪಡೆಯುವುದೇ ಸಾರ್ಥಕ ಬದುಕು. ಆದರೆ, ಇದನ್ನು ಮೈಗೂಡಿಸಿಕೊಳ್ಳದ ಮನುಷ್ಯ ತನ್ನ ದುರಾಸೆಗಳ ಬೆನ್ನಹತ್ತುವುದರಲ್ಲಿಯೇ ಬದುಕು ಸವೆಸಿದನೇ ಹೊರತು, ತನ್ನ ಮನಸ್ಸಿನಲ್ಲಿ ಇನ್ನೂ ಸುಪ್ತಾವಸ್ಥೆಯಲ್ಲಿರುವ ಮೃಗೀಯ ಗುಣಗಳ ಆರೋಗ್ಯಕರ ನಿಗ್ರಹಕ್ಕೆ ಗಮನಹರಿಸಲಿಲ್ಲ.

ಈ ನಡುವೆ, ಮನುಷ್ಯನ ಕಲ್ಪನಾಶಕ್ತಿಯಿಂದಾಗಿ ಸೃಷ್ಟಿಯಾಗಿರುವ ಸಾಕಷ್ಟು ವೈಜ್ಞಾನಿಕ ಆವಿಷ್ಕಾರಗಳು ಮನುಷ್ಯನ ಭೌತಿಕ ಬದುಕನ್ನು ಸಮೃದ್ಧವಾಗಿಸುತ್ತಿದೆ ಎನ್ನುವುದೇನೋ ನಿಜ. ಆದರೆ, ಅದಕ್ಕೆ ಸಮಾನಾಂತರವಾಗಿ ಅವನ ಮನಸ್ಸು ಕೂಡ ವಿಕಸಿತವಾಗಿ 'ಮನುಷ್ಯತ್ವ' ಬೆಳೆಸಿಕೊಳ್ಳುತ್ತಿದ್ದಾನೆಯೇ, ಎಂದರೆ ಖಂಡಿತವಾಗಿ ಇಲ್ಲವೆನ್ನಬಹುದು. ಹಾಗಾಗಿಯೇ, ಮಂಗನ ಕೈಯಲ್ಲಿನ ಮಾಣಿಕ್ಯದಂತೆ ಮನುಷ್ಯತ್ವ ರೂಢಿಸಿಕೊಳ್ಳದ ಮನುಷ್ಯನಿಂದ ವೈಜ್ಞಾನಿಕ ಆವಿಷ್ಕಾರಗಳು ದುರ್ಬಳಕೆಯಾಗುತ್ತಿವೆ. ಯುದ್ಧವೆನ್ನುವ ಕ್ರೌರ್ಯ ಮತ್ತು ತೋಳ್ಬಲದ ಮೂಲಕ ಶಾಂತಿಯನ್ನು ಖರೀದಿಸಲು ಪ್ರಯತ್ನಿಸುತ್ತಿದ್ದಾನೆ. ದೈನಂದಿನ ಬದುಕಿನಲ್ಲಿಯೂ, ಮನುಷ್ಯನ ಕ್ರೌರ್ಯದ ಪ್ರಕರಣಗಳು ದಿನವೂ ನಡೆಯುತ್ತಲೇ ಇರುತ್ತವೆ, ಕೆಲವಷ್ಟೇ ಮಾತ್ರ ನಾನಾಕಾರಣಗಳಿಂದ ಸಾರ್ವಜನಿಕ ವಲಯಗಳಲ್ಲಿ ಸುದ್ದಿಯಾಗುತ್ತವೆ, ಆದರೆ, ಇವುಗಳಿಗಿಂತಲೂ ಹೆಚ್ಚಿನ ಭೀಭತ್ಸ ಪ್ರಕರಣಗಳಿಗೆ ನಾವು ಕಣ್ಣಿದ್ದೂ ಕುರುಡರಾಗುತ್ತೇವೆ, ಬಾಯಿಯಿದ್ದೂ ಮೂಕರಾಗುತ್ತೇವೆ, ಕಿವಿಯಿದ್ದೂ ಕಿವುಡರಾಗುತ್ತೇವೆ.

ವರ್ತಮಾನದ ಕರ್ನಾಟಕದಲ್ಲಿ ಚರ್ಚೆಯಲ್ಲಿರುವ ಕೆಲವು ಪ್ರಕರಣಗಳನ್ನೇ ತೆಗೆದುಕೊಳ್ಳೋಣ. ಈ ವಿಕೃತ ಮನಸ್ಥಿತಿಗಳ ಹಿಂದಿರುವ ಮರ್ಮವೇನು? ಮೂಲತಃ ಮನುಷ್ಯನಿಗೆ ಇನ್ನೊಂದು ಜೀವಿ ತನ್ನ ಕ್ರೂರತೆಗೆ ಸಿಕ್ಕಿ ವಿಲವಿಲ ಒದ್ದಾಡುವಾಗ ಮನಸ್ಸಿಗೆ ಒಂದು ತರಹದ ವಿಕೃತ ಆನಂದ ಸಿಗುತ್ತದೆಯೇ? ಇದಕ್ಕೆ ಪೂರಕವೆಂಬಂತೆ, ಪ್ರಾಣಿಗಳ ನಡುವೆ ಮಾರಣಾಂತಕ ಕಾದಾಟ ಏರ್ಪಡಿಸಿ ಅದನ್ನು 'ಸಂಪ್ರದಾಯ'ವೆಂದು ಹೆಸರಿಸಿ ಮನೋರಂಜನೆ ಪಡೆಯುತ್ತೇವೆ. ನಮ್ಮದೇ ವಸ್ತುಗಳನ್ನು ನಾಶ ಮಾಡುವುದರ ಮೂಲಕ ಅತೀತ ಭಾವನೆಗಳನ್ನು ಹೊರಹಾಕುತ್ತೇವೆ. ಮೃತ್ಯುವಿನೊಂದಿಗೆ ಸೆಣೆಸಾಡುವ, ಶೂಟ್

ಮಾಡಿ ಸಾಯಿಸುವ ವಿಡಿಯೋ ಗೇಮ್ ಗಳು ಕೂಡ ಬಹಳ ಜನಪ್ರಿಯವಾಗಿವೆ. ಒಂದು ಅರ್ಥದಲ್ಲಿ, ಇವುಗಳು ಮನುಷ್ಯನೊಳಗೆ ಸುಪ್ತವಾಗಿರುವ ಮೃಗೀಯ ಪ್ರವೃತ್ತಿಗೆ ಮೇವು ನೀಡುತ್ತವೆ. ಮುಂದುವರಿದಂತೆ, ಹಣದ ಬಲದಿಂದಲೋ, ಬಲವಂತವಾಗಿಯೋ, ಹೆಣ್ಣು ದೇಹಗಳ ಮೇಲೆ ನಡೆಯುವ ಅತ್ಯಾಚಾರಗಳು ಮೃಗೀಯ ಪ್ರವೃತ್ತಿಯ ಪ್ರತೀಕ. ಅಂದರೆ, ಕ್ರೂರತನ ಮನುಷ್ಯನೊಳಗೆ ಸುಪ್ತಾವಸ್ಥೆಯಲ್ಲಿ ಇದ್ದೇ ಇರುತ್ತದೆ. ಅದನ್ನು ಸ್ವನಿಗ್ರಹ ಮಾಡಲಾಗದವನು ಮನುಷ್ಯತ್ವ ಸಿದ್ಧಿಸುವುದಿಲ್ಲ.

ಮನುಷ್ಯ ಲೋಕದ ಬಲುದೊಡ್ಡ ವಿಸ್ಮಯವೆಂದರೆ, ಒಂದು ಮೃಗ ಹಳ್ಳಕ್ಕೆ ಬಿದ್ದರೆ, ಉಳಿದೆಲ್ಲಾ ಮೃಗಗಳು ಸರದಿಯಂತೆ ಕಲ್ಲು ಹೊಡೆದು, ತಾವು ಮಹಾನ್ ಸಂತರೆನ್ನುವಂತೆ ಹೇಳಿಕೆ ನೀಡುವುದು. ಇದನ್ನು ನಮ್ಮ ಮಾಧ್ಯಮಗಳು ಮಾಡುತ್ತವೆ ಮತ್ತು ಆ ವ್ಯಕ್ತಿ ಬೀಳಲೆಂದೇ ಕಾಯುತ್ತಿದ್ದ ಹಿತಶತ್ರುಗಳು ಕೂಡ ಮಾಡುತ್ತಾರೆ. ಇಲ್ಲಿ ನಿಜವಾಗಿ ಚರ್ಚೆ ನಡೆಯಬೇಕಾದದ್ದು, ಮನುಷ್ಯನ ಮನಸ್ಥಿತಿಗಳ ಕುರಿತು. ಕೇವಲ ವ್ಯಕ್ತಿಗಳನ್ನು ಗುರಿಯಾಗಿಸುವುದರಿಂದ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿಲ್ಲ. ಕಾನೂನಿನ ಭಯವಿಲ್ಲದಾಗ, ತನ್ನ ತಪ್ಪು ಸಾರ್ವಜನಿಕಗೊಳ್ಳುವುದಿಲ್ಲವೆನ್ನುವ ಭರವಸೆ ಇರುವಾಗ, ಇಂತಹ ಮನಸ್ಥಿತಿಗಳು ಧೈರ್ಯ ತೆಗೆದುಕೊಳ್ಳುತ್ತವೆ. ಹಾಗೆಯೇ, ಸಾಮಾಜಿಕ ಜಾಲತಾಣಗಳು ಹೇಗೆ ಮನುಷ್ಯನ ವಿಕೃತ ಮನಸ್ಥಿತಿಗಳಿಗೆ ಆಟದ ಮೈದಾನವಾಗಿ ಬಿಟ್ಟಿವೆ, ಅಲ್ಲಿ ಅಪರಿಚಿತರನ್ನು, ವಿಶೇಷವಾಗಿ ಹೆಣ್ಣು ಮಕ್ಕಳನ್ನು ಕೆಟ್ಟದಾಗಿ ಫೋಟೋ ಅಥವಾ ಹೇಳಿಕೆಗಳ ಮೂಲಕ ಗುರಿಯಾಗಿಸಿ ಗುಪ್ತವಾಗಿ ಅವ್ಯಕ್ತ ಆನಂದ ಅನುಭವಿಸಿ ಬಹಿರಂಗವಾಗಿ, ಸಾರ್ವಜನಿಕವಾಗಿ ಸಭ್ಯರಂತೆ ನಡೆದುಕೊಳ್ಳುವವರಿದ್ದಾರೆ ಎನ್ನುವುದನ್ನೂ ಚರ್ಚಿಸಬೇಕಾಗಿದೆ.

ವರ್ತಮಾನದ ಚರ್ಚೆಯ ಇನ್ನೊಂದು ಕುಚೋದ್ಯವೆಂದರೆ, ಯಾವುದೇ ಪುರುಷ ಸೆಲೆಬ್ರಿಟಿಯ ಖಾಸಗಿ ಜೀವನ ಸಾರ್ವಜನಿಕವಾದಾಗ, ಅವನ ಜೀವನದಲ್ಲಿರುವ ಹೆಣ್ಣು ಮಕ್ಕಳು ಖಳನಾಯಕಿಯರಾಗುತ್ತಾರೆ, ಅವರ ಚಾರಿತ್ರ್ಯಹರಣವಾಗುತ್ತದೆ, ಅವರೇ ಈ ಪ್ರಕರಣಗಳ ಸೂತ್ರದಾರರೆನಿಸುತ್ತಾರೆ. ಯಾಕೆ ಹೀಗೆ? ಪುರುಷರು ತಮ್ಮ ಸ್ವಂತ ಬುದ್ಧಿ, ಸ್ವಅರಿವಿನಿಂದ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗದಷ್ಟು ಅಸಹಾಯಕರೇ? ಯಾಕೆ ಹೀಗೆ ಮುಗ್ಧತೆ, ಬಲಿಪಶು, ಅಮಾಯಕತೆಯ ಮುಖವಾಡ? ಪುರುಷ ಮಾಡುವ ಎಲ್ಲಾ ಹೀನಾಯ ಕೆಲಸಗಳಿಗೆ ಯಾವಾಗ ಸ್ವಜವಾಬ್ದಾರಿ ತೆಗೆದುಕೊಳ್ಳುತ್ತಾನೆ?...

ಒಟ್ಟಿನಲ್ಲಿ, ನಾವಿನ್ನೂ ಮೃಗಗಳಂತೆ ಇಂದ್ರಿಯದ ಹಸಿವನ್ನು ಪೂರೈಸುವುದರಲ್ಲೇ ಜೀವನ ಕಳೆಯುತ್ತಿದ್ದೇವೆ. ನಮ್ಮೆಲ್ಲಾ ಭೌತಿಕ ಚಟುವಟಿಕೆಗಳು ಇಂದ್ರಿಯ ಸುಖದತ್ತ ಸುತ್ತುವರಿದಿವೆ. ಉದಾಹರಣೆಗೆ, ನಮ್ಮ ನಾಲಿಗೆಗೆ ರುಚಿಯಾದ ಪುಷ್ಕಳ ಭೋಜನ, ಕಿವಿಗೆ ಇಂಪಾದ ನುಡಿ, ಕಣ್ಣನ್ನು ತಂಪಾಗಿಸಲು ಸೌಂದರ್ಯ, ಮೂಗನ್ನು ಅರಳಿಸಲು ಸುವಾಸನೆ, ದೇಹ ಸ್ಪರ್ಶದ ಸುಖಕ್ಕಾಗಿ ಇನ್ನಷ್ಟು ದೇಹಗಳು, ಇವುಗಳನ್ನು ಅನಿಯಮಿತವಾಗಿ ಗಳಿಸಲು ಆರ್ಥಿಕ ವ್ಯವಹಾರಗಳು, ಇವಿಷ್ಟೇ ಮನುಷ್ಯ ಜೀವನದ ಒಟ್ಟು ತಾತ್ಪರ್ಯವಾಗಿ ಬಿಟ್ಟಿದೆ.

ಈ ನಿಟ್ಟಿನಲ್ಲಿ, ನಾವಿಲ್ಲಿ ಅರ್ಥೈಸಬೇಕಾದುದು, ನಾವಿನ್ನೂ ಸಂಪೂರ್ಣವಾಗಿ ಮನುಷ್ಯರಾಗಿಲ್ಲ, ಅಂದರೆ, ಕೇವಲ ದೇಹ ಮಾತ್ರ ಮನುಷ್ಯ ರೂಪಕ್ಕೆ ಮಾರ್ಪಾಡಾಗಿದೆ, ಮನಸ್ಸಿನ್ನೂ ವಿಕಸಿತವಾಗಿ ಪ್ರಬುದ್ಧತೆ ಪಡೆದಿಲ್ಲ. ಅವಕಾಶ ಸಿಕ್ಕಲ್ಲಿ, ಹೆಚ್ಚಿನವರ ಮೃಗೀಯ ಗುಣಗಳು ಹೊರಹೊಮ್ಮುತ್ತವೆ. ನಮ್ಮ ಶಿಕ್ಷಣ ವ್ಯವಸ್ಥೆಯು ಕೂಡ ಕೇವಲ ವಿದ್ಯಾರ್ಥಿಗಳ ಆರ್ಥಿಕ ಅಭಿವೃದ್ಧಿ ಮತ್ತು ಅದನ್ನು ಸಿದ್ಧಿಸುವ ವಿವಿಧ ಮಾರ್ಗಗಳತ್ತ ಗಮನ ಹರಿಸುತ್ತವೆಯೇ ಹೊರತು ಮಾನವೀಯ ಮೌಲ್ಯಗಳನ್ನು ಬೆಳೆಸುವುದಕ್ಕೆ ಕ್ರಮ ಕೈಗೊಳ್ಳುವುದಿಲ್ಲ. ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡು, ನಿರ್ಲಿಪ್ತತೆ, ಸಂಯಮ ಸಾಧಿಸುವುದೇ ನಿಜವಾದ ಮನುಷ್ಯತ್ವ. ಈ ಹಿನ್ನೆಲೆಯಲ್ಲಿ, ಸದ್ಯ ಸಾರ್ವಜನಿಕ ಚರ್ಚೆಗೆ ಗ್ರಾಸವಾಗಿರುವವರು ಕೇವಲ ವ್ಯಕ್ತಿಗಳಲ್ಲ, ಬದಲಾಗಿ ಮನುಷ್ಯ ಜಗತ್ತಿನಲ್ಲಿ ಮೈತಳೆದ ಮನುಷ್ಯತ್ವವಿಲ್ಲದ ವ್ಯಕ್ತಿತ್ವಗಳು. ಎಲ್ಲಿಯವರೆಗೆ ಹಣಬಲ, ತೋಳ್ಬಲ, ಪ್ರಭಾವಗಳ ಬೆಂಬಲದ ಗ್ಯಾರಂಟಿ ಇರುತ್ತದೆಯೋ, ಮತ್ತು ಮನುಷ್ಯ ತನ್ನ ನಡೆ-ನುಡಿಗಳ ನಡುವೆ ವ್ಯತ್ಯಾಸವಿಲ್ಲದಂತೆ ಪಾರದರ್ಶಕವಾಗಿ ಬದುಕುವುದನ್ನು ರೂಢಿಸಿ ಕೊಳ್ಳುವುದಿಲ್ಲವೋ, ಇಂತಹ ಪ್ರಕರಣಗಳು ನಡೆಯುತ್ತಲೇ ಇರುತ್ತವೆ. ಅಲ್ಲಿಯವರೆಗೆ, ಮನುಷ್ಯನನ್ನು ನಿಯಂತ್ರಣದಲ್ಲಿಡಲು ನಮ್ಮ ನಾಗರೀಕ ಪ್ರಪಂಚಕ್ಕೆ ಕಟ್ಟುನಿಟ್ಟಿನ ಮತ್ತು ಯಾವುದೇ ಆಮಿಷಗಳಿಗೆ ರಾಜಿಯಾಗದ ಕಾನೂನು ವ್ಯವಸ್ಥೆಯ ಅಗತ್ಯವಿದೆ. ಬರಿ ದೇಹದಿಂದ ಮನುಷ್ಯನೆನಿಸಿಕೊಳ್ಳುವುದಿಲ್ಲ, ಉದಾತ್ತ ಮನಸ್ಥಿತಿಯಿಂದ ಮನುಷ್ಯತ್ವ ಸಿದ್ದಿಸುತ್ತಾನೆ.



**ಡಾ. ಜ್ಯೋತಿ**
**ಸಹಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ,**
**ತುಮಕೂರು ವಿಶ್ವವಿದ್ಯಾನಿಲಯ,**
**ತುಮಕೂರು**






**ಯತೀಶ್ ಎಲ್. ಶೆಟ್ಟಿಗಾರ್, ಸಿದ್ಧಕಟ್ಟೆ ,**
**ವಿದ್ಯಾರಣ್ಯಪುರ, ಬೆಂಗಳೂರು**

# ಬಾರಕೂರು, ವೀರಭದ್ರ, ಮತ್ತು ಶೆಟ್ಟಿಗಾರರು

**ಈ ಲೇಖನಕ್ಕೆ ಆಧಾರಗಳು:**

1. ಬಾರಕೂರು ಶ್ರೀ ಬ್ರಹ್ಮಲಿಂಗ ವೀರಭದ್ರ, ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ 1997 ರಲ್ಲಿ ನಡೆಸಿದ ಅಷ್ಟಮಂಗಳ ಪ್ರಶ್ನೆಯಲ್ಲಿ "ದಕ್ಷಯಜ್ಞದಂತಹ ಘಟನೆ ನಮ್ಮ ಸಮಾಜದಲ್ಲೇ ನಡೆದು 'ಶ್ರೀ ಬ್ರಹ್ಮಲಿಂಗೇಶ್ವರ'ನು ಶ್ರೀ 'ಬ್ರಹ್ಮಲಿಂಗವೀರಭದ್ರ'ನಾಗಿ ಪರಿವರ್ತನೆಯಾದನೆಂದೂ, ಮೂಲ ದಕ್ಷಯಜ್ಞ ಪ್ರಸಂಗದಲ್ಲಿ ದಾಕ್ಷಾಯಿಣಿ ದಿವ್ಯಾಗ್ನಿಯನ್ನು ಪ್ರವೇಶಿಸಿದರೆ ಇಲ್ಲಿ ಜಲಪ್ರವೇಶ ನಡೆದಿದೆ" ಎಂಬ ಮಾಹಿತಿ, ಅಷ್ಟಮಂಗಳ ಪ್ರಶ್ನೆಯಿಂದ ಲಭ್ಯವಾಗಿತ್ತು.

2. ದ.ಕ. ಜಿಲ್ಲಾ ಪದ್ಮಶಾಲಿ ಮಹಾಸಭಾ (ರಿ), ಮಂಗಳೂರು - ಇವರು ಕರಾವಳಿ ಪದ್ಮಶಾಲಿಗರ ಆದಿ ಮೂಲಸ್ಥಾನ ಶೋಧನೆ ಕುರಿತು ಬಾರಕೂರಲ್ಲಿ 2014 ರಲ್ಲಿ ನಡೆಸಿದ ಅಷ್ಟಮಂಗಳ ಪ್ರಶ್ನೆಯಲ್ಲಿ ಕಂಚಿಯಿಂದ ಬಾರಕೂರಿಗೆ ಬಂದ ಪದ್ಮಶಾಲಿಗರಿಗೆ ಬಾರಕೂರಿನಲ್ಲಿ ಶ್ರೀ ಬ್ರಹ್ಮಲಿಂಗೇಶ್ವರ ದೇವರ ಗುಡಿಯ ಸಮೀಪವೇ "ದೇವಿ" ಗುಡಿ ನಿರ್ಮಿಸಿದ ಮಾಹಿತಿ ತಿಳಿಸಿದ್ದು, ಆ ಆಧಾರದಿಂದ ಈ ಚರಿತ್ರೆ ರಚಿಸಲಾಗಿದೆ. ಗಮನಿಸಿ: ಈ ಘಟನೆಯ ವ್ಯಕ್ತಿಗಳಿಗೆ ಮೂಲ ದಕ್ಷಯಜ್ಞದ ಹೆಸರನ್ನೇ ಬಳಸಲಾಗಿದೆ.

**ಪೀಠಿಕೆ:**

ಬಾರಕೂರು ಸಾಮಂತರಾಜನ ರಾಜಧಾನಿ. ರಾಜ ವೀರವರ್ಮ ಬಲ್ಲಾಳ. ಆ ಕಾಲವು (14ನೇ ಶತಮಾನ) ಕರಾವಳಿಯ ಧಾರ್ಮಿಕ ಉನ್ನತಿಯ ಕಾಲ. ರಾಜಧಾನಿಯಲ್ಲಿ 365 ದೇವಾಲಯಗಳು. ದಿನಕ್ಕೊಂದು ದೇವಾಲಯದಲ್ಲಿ ರಾಜನ ಹೆಸರಲ್ಲಿ ಸೇವೆ. ರಾಜ ಭಕ್ತಿಯಿಂದ ಆ ಸೇವೆಯಲ್ಲಿ ಭಾಗವಹಿಸುತ್ತಿದ್ದು, ತನ್ನ ರಾಜ್ಯದ ಉನ್ನತಿಗೆ ಮತ್ತು ಪ್ರಜೆಗಳ ಕ್ಷೇಮಕ್ಕೆ, ಸದಾ ದೇವರ ಆಶೀರ್ವಾದ ಅಗತ್ಯವೆಂದರಿತು, ದೇವತಾ ಆರಾಧನೆ ಮಾಡುತ್ತಿದ್ದವನು.



AI generated image: No photo credits required

ವಿಶಿಷ್ಟವಾದ ಧಾರ್ಮಿಕ ತಳಹದಿಯ ಆಡಳಿತ. 365 ದೇವಾಲಯಗಳ ಸುಗಮ ವ್ಯವಸ್ಥೆಗೆ, ಆ ದೇವಾಲಯಗಳಲ್ಲಿ ಕೆಲವನ್ನು ತನ್ನ ರಾಜ್ಯದ ಒಂದೊಂದು ಕುಲಕ್ಕೆ"ಕುಲದೇವರಾಗಿ" ಒಪ್ಪಿಸುವ ವ್ಯವಸ್ಥೆ. ಆ ದೇವಳಗಳಿಗೆ ಸುದೀರ್ಘವೂ, ಸುಗಮವೂ ಆದ ಆಡಳಿತ ವ್ಯವಸ್ಥೆಗಾಗಿ ಆದಾಯ ತರುವ 'ಭೂದಾನ' ಅರ್ಥಾತ್ ಉಂಬಳಿ.

ಈ 365 ದೇವಳದ ಅರ್ಚಕರಿಗೆ ಮಡಿ ಬಟ್ಟೆ ಒದಗಿಸುವ ವ್ಯವಸ್ಥೆಯಲ್ಲೊಮ್ಮೆ ಅನಾನುಕೂಲ! ಈ ವಸ್ತ್ರಗಳ ಆಯಾತ ತಮಿಳುನಾಡಿಂದ. ಆಯಾತಕ್ಕೇನೋ ಅಡಚಣೆ. ಈ ಅಡಚಣೆಯನ್ನು ಶಾಶ್ವತವಾಗಿ ನಿವಾರಿಸಲು, ನೇಕಾರ ಕುಟುಂಬಗಳನ್ನೇ ಆಯಾತ ಮಾಡಿಕೊಂಡು ಶಾಶ್ವತ ಪರಿಹಾರ ಕಂಡುಕೊಂಡದ್ದು, ರಾಜನ ಪರಿಪೂರ್ಣ, ದೂರದರ್ಶಿತ್ವದ ಆಡಳಿತಕ್ಕೊಂದು ಉತ್ತಮ ಉದಾಹರಣೆ!

ಬಾರಕೂರು ಸಂಸ್ಥಾನದಲ್ಲಿ ಪ್ರತಿಯೊಂದು ಜಾತಿಗೂ ಉಪನಾಮ. ಆ ಹೆಸರಿಂದಲೇ ಜಾತಿಯ ಪರಿಚಯ. ಕರಾವಳಿಯಲ್ಲಿ ಸಾಮಾನ್ಯವಾಗಿ ಉಪನಾಮವಿಲ್ಲದ ಜಾತಿಯೇ ಇಲ್ಲ. ಕೆಲವೊಂದು ಜಾತಿಗೆ ಹಲವಾರು ಉಪನಾಮಗಳು. ಉದಾ: ಬಂಟ ಜಾತಿಗೆ ಹತ್ತಾರು ಉಪನಾಮಗಳು - ಶೆಟ್ಟಿ, ರೈ, ಅಜಿಲ, ಹೆಗಡೆ, ನಾಯಕ್, ಇತ್ಯಾದಿ; ಬ್ರಾಹ್ಮಣರಲ್ಲಿ ಭಟ್ಟ, ಅಡಿಗ, ರಾವ್, ಆಚಾರ್ಯ, ಐತಾಳ, ಸೋಮಯಾಜಿ, ಮಯ್ಯ, ಇತ್ಯಾದಿ.

ಕರಾವಳಿಗೆ ಆಗಮಿಸಿದ ಪದ್ಮಶಾಲಿಗರಿಗೆ ಯಾವುದೇ ಉಪನಾಮವಿರಲಿಲ್ಲ. ಇಲ್ಲಿಯ ಪದ್ಧತಿಗೆ ಹೊಂದಿಕೊಳ್ಳಬೇಕಾಗಿ ಬಂದಾಗ ತಮ್ಮ ಪೂರ್ವಜರು, ಕಂಚಿಯಲ್ಲಿ ತನ್ನದೇ ಜಾತಿಯ ವಿವಾಹದ ಪೌರೋಹಿತ್ಯ/ಮೇಲ್ವಿಚಾರಣೆ ಕಾರ್ಯವನ್ನು ನಿರ್ವಹಿಸುತ್ತಿದ್ದು, ಅಲ್ಲಿ ಅವರನ್ನು "ಶೆಟ್ಟಿಗಾರ್" ಎಂದು ಕರೆಯುತ್ತಿದ್ದ ಕಾರಣ ಅದೇ ಕುಟುಂಬದಿಂದ ಬಂದವರಾದ್ದರಿಂದ ಆ ಹೆಸರನ್ನೇ ಉಪನಾಮವನ್ನಾಗಿ ಆಯ್ಕೆ ಮಾಡಿಕೊಂಡು ಬಳಸಲಾರಂಬಿಸಿದರು. ಹೀಗಾಗಿ ಕರಾವಳಿಗೆ ಬಂದ ಪದ್ಮಶಾಲಿಗರು "ಶೆಟ್ಟಿಗಾರ"ರಾದರು. ಸಮಾಜದ ಜನಸಂಖ್ಯೆ ಬೆಳೆದಂತೆ ಕರಾವಳಿಯ ಉದ್ದಗಲಕ್ಕೂ ವಿಸ್ತರಿಸಿದರು. ಬಿಟ್ಟ ಪ್ರದೇಶಕ್ಕೆ ವಿಸ್ತರಿಸಿದ ಪದ್ಮಶಾಲಿಗರಲ್ಲಿ ಕೆಲವರು "ಶೆಟ್ಟಿ" ಪದವನ್ನೂ ಉಪನಾಮವಾಗಿ ಬಳಸಿದರು. ಹಾಗಾಗಿ ಕರಾವಳಿ ಪದ್ಮಶಾಲಿಗರಲ್ಲಿ ಶೆಟ್ಟಿಗಾರ್ ಮತ್ತು ಶೆಟ್ಟಿ ಎಂಬ ಎರಡು ಉಪನಾಮಗಳಿವೆ.

ರಾಜ ತಾನು ಆರಾಧಿಸುತ್ತಿದ್ದ ಶ್ರೀ ಬ್ರಹ್ಮಲಿಂಗೇಶ್ವರ ದೇವಸ್ಥಾನವನ್ನು ಬಾರಕೂರಿಗೆ ಆಗಮಿಸಿದ ಪದ್ಮಶಾಲಿಗರಿಗೆ ನೀಡುತ್ತಾನೆ. ಬಾರಕೂರಲ್ಲಿ ಕುಲದೇವಸ್ಥಾನವನ್ನು ಹೊಂದಿದ ಪದ್ಮಶಾಲಿಗರಿಗೆ ರಾಜಧಾನಿಯಿಂದ ಹೊರಭಾಗದಲ್ಲಿ ಖಾಲಿ ಇದ್ದ ವಿಶಾಲ ಪ್ರದೇಶವನ್ನು ವಾಸ್ತವ್ಯಕ್ಕಾಗಿ ನೀಡುತ್ತಾನೆ.

ಪದ್ಮಶಾಲಿಗರು ನೆಲೆಸಿದ ಆ ಪ್ರದೇಶವೇ "ಪದ್ಮಶಾಲಿಕೇರಿ" - ಇಂದಿನ "ಸಾಲಿಕೇರಿ". ದೇವಸ್ಥಾನದ ಆಡಳಿತದ ಮುಖ್ಯಸ್ಥರು ಹಾಗೂ ಒಂದೆರಡು ಪರಿಚಾರಕ ಕುಟುಂಬ ಬಾರಕೂರಿನ ದೇವಸ್ಥಾನದ ಸಮೀಪವೇ ನೆಲೆಸಿದರು. ಅದುವೇ ಪಟಸಾಲಕೇರಿ. ಇದು ಬಾರಕೂರಿನ ಹತ್ತು ಕೇರಿಗಳಲ್ಲೊಂದು. ಹತ್ತೂ ಕೇರಿಗಳಲ್ಲಿ ನಾಲ್ಕಾರು ದೇವಾಲಯಗಳು, ಅದರಲ್ಲೊಂದಕ್ಕೆ ಪ್ರಧಾನ ದೇವರ ಪಟ್ಟ, ಹಾಗೇ ಪಟಸಾಲಕೇರಿಗೆ, ಪದ್ಮಶಾಲಿಗರಿಗೆ ನೀಡಿದ "ಶ್ರೀ ಬ್ರಹ್ಮಲಿಂಗೇಶ್ವರ" ನೇ ಪ್ರಧಾನ ದೇವರು.

ಮಹಾಸಭಾವು 2014 ರಲ್ಲಿ ನಡೆಸಿದ ಪ್ರಶ್ನೆಯಲ್ಲಿ ತಿಳಿಸಿದಂತೆ, ಸಮಾರು 1400 ವರ್ಷಗಳ ಹಿಂದೆ ಅಮರಾವತಿಯಿಂದ ಹೊರಟ ಪದ್ಮಶಾಲಿಗರ ಪೂರ್ವಜರು ಕಂಚಿಗೆ ಬಂದು ನೆಲೆಸಿದ್ದರು. ಈ ರೀತಿ ನೆಲೆಸಿದ ಪದ್ಮಶಾಲಿ ಕುಟುಂಬಗಳು 101 ಮನೆತನಗಳಿಂದ ಕೂಡಿತ್ತು. ಈ ಕುಟುಂಬಗಳು ರೇಷ್ಮೆ ಸೀರೆ ನೇಕಾರಿಕೆ ಮತ್ತು ಅದರ ವ್ಯಾಪಾರ ಮಾಡುತ್ತಿದ್ದು, ಬಹುತೇಕ ಕುಟುಂಬಗಳು ಶ್ರೀಮಂತವಾಗಿದ್ದವು. ಇವರು ಯಾವುದೇ ದೇವರನ್ನು ಕುಲದೇವರೆಂದು ಆರಾಧಿಸುತ್ತಿರಲಿಲ್ಲ. ಹೀಗಿರುವಾಗ ಒಮ್ಮೆ 'ಘೋರ' ಮನೆತನದ ಎರಡು ಕುಟುಂಬಗಳಿಗೆ ಅತಿಯಾದ ಸಂಕಟವುಂಟಾಯಿತು. ಆಗ ಆ ಕುಟುಂಬಗಳು ಆ ಊರಿನ ಗ್ರಾಮದೇವತೆ (ಮಾರಿಯಮ್ಮ) 'ಕಾಳಿ' ಎಂದು ಕರೆಯಲ್ಪಡುತ್ತಿದ್ದ, ಮಹಿಷಾಸುರ ಮರ್ದಿನಿ ಚರಿತ್ರೆಯನ್ನು ಹೊಂದಿದ ದೇವಿಯಲ್ಲಿ ಮೊರೆ ಹೋಗುತ್ತಾರೆ. ಭಕ್ತ ರಕ್ಷಕಿ ಕಾಳಿ ದೇವಿಯಿಂದ ಅವರ ಸಂಕಷ್ಟಗಳು ನಿವಾರಣೆಯಾಗುತ್ತದೆ. ಹೀಗಾಗಿ ಆ ಎರಡು ಕುಟುಂಬಗಳು ಆ ಕಾಳಿದೇವಿಯನ್ನು ಕುಲದೇವರಾಗಿ ಆರಾಧಿಸಲಾರಂಬಿಸಿದರು. ಕಾಲಾನಂತರದಲ್ಲಿ ಈ ಎರಡು ಕುಟುಂಬಗಳು ಹಲವು ಕುಟುಂಬಗಳಾಗಿ ಬೆಳೆಯಿತು. ಈ ಸಮೂಹದಿಂದ ಕೆಲವು ಕುಟುಂಬಗಳು ಮದುರೈಗೆ ಹೋಗಿ ಅಲ್ಲಿ ಕೆಲವು ಕಾಲ ತಂಗಿದ್ದು, ಅವರೇ ಈಗ್ಗೆ ಸುಮಾರು 500 ವರ್ಷಗಳ ಹಿಂದೆ ಬಾರಕೂರಿಗೆ ಬಂದವರಾಗಿದ್ದಾರೆ. ಆ ಕಾರಣದಿಂದ ಪದ್ಮಶಾಲಿ ವಂಶದ ಘೋರ ಮನೆತನದವರು ಆರಾಧಿಸಿಕೊಂಡು ಬರುತ್ತಿದ್ದ ದೇವಿಯನ್ನು ಬಾರಕೂರಿನಲ್ಲಿ, ತಮ್ಮ ಆರಾಧನೆಗಾಗಿ ರಾಜನಿಂದ ದೊರೆತ ಶ್ರೀ ಬ್ರಹ್ಮಲಿಂಗೇಶ್ವರನ ಸಾನ್ನಿಧ್ಯದ ಬಲ ಭಾಗದಲ್ಲಿ ಗುಡಿಕಟ್ಟಿ ಆರಾಧಿಸಿಕೊಂಡು ಬಂದಿದ್ದಾರೆ. ತಾವು

ವಾಸ್ತವ್ಯವಿದ್ದ ಪದ್ಮಶಾಲಿಕೇರಿಯಲ್ಲಿ, ಕಂಚಿಯಲ್ಲಿ ಆರಾಧಿಸುತ್ತಿದ್ದ ಪರಿವಾರ ದೈವಗಳನ್ನು ಪ್ರತಿಷ್ಠಾಪಿಸಿಕೊಂಡು ಬರಲಾಗಿದೆ. ಇದುವೇ ಸಾಲಿಕೇರಿಯಲ್ಲಿ ಈಗ ಆರಾಧಿಸಲ್ಪಡುತ್ತಿರುವ 'ಕುಮಾರ ಚಾವಡಿ'.

**ಶ್ರೀ ಬ್ರಹ್ಮಲಿಂಗೇಶ್ವರ ಶ್ರೀ ಬ್ರಹ್ಮಲಿಂಗ ವೀರಭದ್ರನಾದ**

ಪದ್ಮಶಾಲಿಕೇರಿಯಲ್ಲಿ ಪದ್ಮಶಾಲಿಗರು ಮಡಿಬಟ್ಟೆ ಮತ್ತು ಸೀರೆ ನೇಕಾರಿಕೆ ಮಾಡಿ, ನೇಯ್ದ ಈ ಬಟ್ಟೆಗಳನ್ನು ರಾಜಧಾನಿಯಲ್ಲಿ ವ್ಯಾಪಾರ ಮಾಡಿಕೊಂಡಿದ್ದರು. ಅಲ್ಲೊಬ್ಬ ಯುವಕ ಹೆಚ್ಚು ಶ್ರಮ ಪಡದೆ ಮಿತ ದುಡಿಮೆ ಮಾಡಿಕೊಂಡಿದ್ದ. ಈತ ವಿಚಿತ್ರ ನಡವಳಿಕೆಯವನಾಗಿದ್ದು ಅತ್ತ ಬೈರಾಗಿಯೂ ಅಲ್ಲ, ಇತ್ತ ಉತ್ತಮ ಕೆಲಸಗಾರನೆಂದೂ ಹೇಳಲಾಗದು. ದೃಢಕಾಯನಾಗಿದ್ದರೂ ಅಂದ ಚೆಂದದ ಬಗ್ಗೆ ಆಸಕ್ತಿ ಇಲ್ಲದಂತಿದ್ದವ. ಪದ್ಮಶಾಲಿಕೇರಿ ನಿವಾಸಿ, ನೇಕಾರ. ನೇಯ್ದ ಬಟ್ಟೆಯನ್ನು ರಾಜಧಾನಿಯಲ್ಲಿ ವ್ಯಾಪಾರ ಮಾಡಿಕೊಂಡು ಜೀವನ ನಿರ್ವಹಿಸುತ್ತಿದ್ದವನು. ಬಾರಕೂರಿಗೆ ಬಂದಾಗ ಅಪರೂಪಕ್ಕೊಮ್ಮೆ ತನ್ನ ಕುಲದೇವಸ್ಥಾನಕ್ಕೆ ಬೇಟಿಕೊಡುತ್ತಿದ್ದ. ಆತನೇ "ಈಶ್ವರ ಶೆಟ್ಟಿಗಾರ."

ಬಾರಕೂರು ದೇವಳದ ಆಡಳಿತ ಮೊಕ್ತೇಸರರು, ದಕ್ಷ ಶೆಟ್ಟಿಗಾರರು. ಇವರ ನೇತೃತ್ವದಲ್ಲಿ ದೇವಸ್ಥಾನದ ನಿರ್ವಹಣೆಯು ವ್ಯವಸ್ಥಿತವಾಗಿಯೂ ಉತ್ತಮವಾಗಿಯೂ ನಡೆಯುತ್ತಿತ್ತು. ದಕ್ಷ ಶೆಟ್ಟಿಗಾರರಿಗೆ ಗಂಡು ಮಕ್ಕಳಿಲ್ಲ. ಹತ್ತಾರು ಹೆಣ್ಣು ಮಕ್ಕಳು. ಅವರಲ್ಲಿ ಕಿರಿಯ ಪುತ್ರಿಯೇ ದಾಕ್ಷಾಯಿಣಿ. ಸುಂದರಿಯೂ, ಚುರುಕಾಗಿಯೂ, ದೈವ ಭಕ್ತಳೂ ಆಗಿದ್ದ ಆಕೆ, ದೇವಸ್ಥಾನಕ್ಕೆ ನಿತ್ಯವೂ ಬೇಟಿಕೊಟ್ಟು ಅಲ್ಲಿಯ ಕೆಲಸ ಕಾರ್ಯಗಳ ವೀಕ್ಷಣೆ, ಮೇಲ್ವಿಚಾರಣೆಯೊಂದಿಗೆ ತನ್ನಿಂದಾದ ಕೆಲಸಗಳನ್ನೂ ಭಕ್ತಿಯಿಂದ ನಿರ್ವಹಿಸುತ್ತಿದ್ದ ಶಿವ ಭಕ್ತೆ. ತಂದೆಯ ಮುದ್ದಿನ ಮಗಳು.

ದೇವಾಲಯದ ಎಲ್ಲ ಮೇಲ್ವಿಚಾರಣೆಯ ಜವಾಬ್ದಾರಿಯೂ ದಾಕ್ಷಾಯಿಣಿಯದು. ಈಕೆಯ ಉಸ್ತುವಾರಿಯಲ್ಲಿ ದೇವಾಲಯಕ್ಕೆ ಬಂದ ಭಕ್ತರಿಗೆ ದೇವರ ದರ್ಶನ, ದೇವರಸೇವೆ, ಪ್ರಸಾದ ವಿತರಣೆಯಲ್ಲಿ ಯಾವ ಕುಂದೂ ಇರುತ್ತಿರಲಿಲ್ಲ. ಭಕ್ತರ, ಅದರಲ್ಲೂ ಯವಕರ ಆಕರ್ಷಣೆಯ ಕೇಂದ್ರ ಬಿಂದುವಾದಳು ದಾಕ್ಷಾಯಿಣಿ. ಎಲ್ಲರೊಡನೆಯೂ ಆತ್ಮೀಯತೆಯಿಂದ ವ್ಯವಹರಿಸುತ್ತಿದ್ದು, ದಾಕ್ಷಾಯಿಣಿಯನ್ನು ಕಂಡರೆ ಎಲ್ಲರಿಗೂ ಅಭಿಮಾನ. ದೇವಸ್ಥಾನಕ್ಕೆ ಬೇಟಿಕೊಟ್ಟ ಸರ್ವರೂ ದಾಕ್ಷಾಯಿಣಿಯನ್ನು ಮಾತನಾಡಿಸದೇ ಹೋಗುತ್ತಿರಲಿಲ್ಲ. ಕೆಲವು ಯವಕರು ಆಕೆಯ ಸಖ್ಯಕ್ಕಾಗಿಯೇ ದೇವಸ್ಥಾನಕ್ಕೆ ಬರಲಾರಂಭಿಸಿದರು.

ಹೀಗಿರುವಾಗ ಶಿರದ ಕೂದಲನ್ನು ಕತ್ತರಿಸದೆ ಅದನ್ನು ಸರಿಯಾಗಿಯೂ ಬಾಚದೆ, ಸರಿಯಾದ ಬಟ್ಟೆ ಬರೆ ಕೂಡ ತೊಡದೆ ಬೈರಾಗಿಯಂತಿದ್ದ, ದಷ್ಟ ಪುಷ್ಟ ಯವಕನಾಗಿದ್ದ, ಈಶ್ವರ ಶೆಟ್ಟಿಗಾರ ದೇವಸ್ಥಾನಕ್ಕೆ ಅಪರೂಪಕ್ಕೊಮ್ಮೆ ಬೇಟಿಕೊಡುತ್ತಿದ್ದ. ವಿಚಿತ್ರ ಸ್ವಭಾವದ ಈಶ್ವರ ಶೆಟ್ಟಿಗಾರನನ್ನು ಗಮನಿಸಿದ ದಾಕ್ಷಾಯಿಣಿಗೆ ಏನೋ ಕುತೂಹಲವಾಯ್ತು. ಆದರೆ ಯಾರೊಂದಿಗೂ ಬೆರೆಯದ, ಮಾತನಾಡಿಸಿದರೆ ಅಗತ್ಯಕ್ಕಿಂತ ಹೆಚ್ಚು ಮಾತನಾಡದ, ಹೆಚ್ಚು ಮಾತನಾಡಿದರೆ ಕೋಪಗೊಳ್ಳುವ ವ್ಯಕ್ತಿತ್ವದ ಈತನ ಬಗ್ಗೆ ದಾಕ್ಷಾಯಿಣಿಗೆ ಒಂದು ರೀತಿಯ ಕುತೂಹಲ, ಆಕರ್ಷಣೆ ಉಂಟಾಯ್ತು. ಆತನನ್ನು ಮಾತನಾಡಿಸುವ ಪ್ರಯತ್ನ ಮಾಡಿ, ಗದರಿಸಿಕೊಂಡರೂ ಕೋಪಗೊಳ್ಳದೇ ಹಲವು ಪ್ರಯತ್ನಗಳ ನಂತರ ಮಾತನಾಡಿಸುವಲ್ಲಿ ದಾಕ್ಷಾಯಿಣಿ ಯಶಸ್ವಿಯಾದಳು. ಆತನ ಪೂರ್ವಾಪರ ತಿಳಿದುಕೊಂಡಳು. ಹೀಗೆ ಅವರ ಸಂಪರ್ಕ ಮುಂದುವರಿಯಿತು. ಹಾಗಂತ ಅದಕ್ಕಾಗಿಯೇ ಅವರಿಬ್ಬರೂ ದೇವಳಕ್ಕೆ ಬೇಟಿ ಕೊಡುತ್ತಿರಲಿಲ್ಲ. ತನ್ನ ದೈನಂದಿನ ಕಾರ್ಯಕ್ಕಾಗಿ ದಾಕ್ಷಾಯಿಣಿ ಭೇಟಿ ಕೊಡುತ್ತಿದ್ದರೆ, ವ್ಯಾಪಾರಕ್ಕಾಗಿ ಬಾರಕೂರಿಗೆ ಬಂದ ಈಶ್ವರ ಶೆಟ್ಟಿಗಾರ ಅಪರೂಪಕ್ಕೊಮ್ಮೆ ದೇವಳಕ್ಕೂ ಬೇಟಿಕೊಡುತ್ತಿದ್ದ. ಆತನ ಆಕರ್ಷಕ ನಿಲುವು, ವ್ಯಕ್ತಿತ್ವ ದಾಕ್ಷಾಯಿಣಿಯನ್ನು ಆಕರ್ಷಿಸಿತು. ಹಲವು ದಿನದ ಸಂಪರ್ಕದ ನಂತರ ಇಬ್ಬರಲ್ಲೂ ಒಬ್ಬರಿಗೊಬ್ಬರಿಗೆ ಆಕರ್ಷಣೆಯಾಗಿ ಪ್ರೀತಿ ಬೆಳೆಯಿತು. ಆದರೆ ಶ್ರೀಮಂತನಾದ ತಂದೆ, ಬೈರಾಗಿಯಂತಿದ್ದ ಮತ್ತು ಬಡವನಾದ, ಅಸಂಸ್ಕೃತನಂತಿದ್ದ ಯುವಕನಿಗೆ ತನ್ನ ಮಗಳನ್ನು ಕೊಡಲು ಒಪ್ಪಲಿಲ್ಲ. ಆದರೆ ದಾಕ್ಷಾಯಿಣಿ ಹಾಗೂ ಈಶ್ವರ ಒಬ್ಬರನ್ನೊಬರು ಬಿಟ್ಟಿರಲಾರದಾದರು. ಅಂತಿಮವಾಗಿ ಆ ಯವಕನನ್ನು ಪ್ರೇಮ ವಿವಾಹವಾದ ದಾಕ್ಷಾಯಿಣಿ ಪದ್ಮಶಾಲಿಕೇರಿ ಸೇರಿದಳು.

ತನ್ನ ಮಾತನ್ನು ಮೀರಿ ಮದುವೆಯಾದ ಮಗಳನ್ನೂ, ಅಳಿಯನನ್ನೂ ದೂರಮಾಡಿದ ದಕ್ಷ ಶೆಟ್ಟಿಗಾರ, ಅವರನ್ನು ಸದಾ ಅವಮಾನಿಸುತ್ತಿದ್ದ. ಒಮ್ಮೆ ಆ ಕಾರಣಕ್ಕಾಗಿಯೇ , ಬಾರಕೂರಿನಲ್ಲಿ ಯಾಗವೊಂದನ್ನು ವ್ಯವಸ್ಥೆ ಮಾಡಿ ಎಲ್ಲ ಸಮಾಜಸ್ಥರಿಗೆ ಆಹ್ವಾನ ನೀಡಿದರೂ, ತನ್ನ ಅಳಿಯ ಹಾಗೂ ಮಗಳನ್ನು ಆ ಯಾಗಕ್ಕೆ ಕರೆಯಲಿಲ್ಲ.

ಪದ್ಮಶಾಲಿಕೇರಿಯ ಸಮಾಜಸ್ಥರು ತಂಡೋಪ ತಂಡವಾಗಿ ಪ್ರಯಾಣಿಸು ತ್ತಿರುವುದನ್ನು ಗಮನಿಸಿದ ದಾಕ್ಷಾಯಿಣಿ ಪರಿಚಯಸ್ಥೆಯೊಬ್ಬಳಲ್ಲಿ ವಿಚಾರಿಸಲಾಗಿ, ಅವರೆಲ್ಲರೂ ತನ್ನ ತವರು ಬಾರಕೂರಿಗೆ ಪ್ರಯಾಣಿಸುತ್ತಿರುವುದನ್ನು ತಿಳಿದು ಅದರಲ್ಲೂ ತನ್ನ ತವರಿನಲ್ಲಿ ಯಾಗವೊಂದು ನಡೆಯುತ್ತಿರುವುದು ತಿಳಿದು, ಹಿಂದೆ ನಡೆಯುತ್ತಿದ್ದ ಕಾರ್ಯಕ್ರಮಗಳಲ್ಲಿ ತಾನು ನಿರ್ವಹಿಸಿದ ಕೆಲಸ, ಅದನ್ನು ಗಮನಿಸಿ ಪ್ರಶಂಸಿದ ತಂದೆ ಎಲ್ಲ ಸ್ಮರಿಸಿಕೊಂಡಳು. ತನ್ನ ತಾಯಿಯನ್ನೂ ಸಹೋದರಿಯರನ್ನೂ, ತಾನು ಅವರೊಡನೆ ಕಳೆದ ಕಾಲವನ್ನೂ ಸ್ಮರಿಸಿಕೊಳ್ಳುತ್ತಾ, ಈ ಸಮಯದಲ್ಲಿ ತಂದೆ ನಮ್ಮನ್ನು ಕರೆಯದಿರುವ ಬಗ್ಗೆ ಬಹುವಾಗಿ ಬೇಸರ ಪಟ್ಟುಕೊಂಡಳು. ಸ್ವಲ್ಪ ಹೊತ್ತಿನ ನಂತರ ಪತಿಯಲ್ಲಿ ಈ ವಿಷಯವನ್ನು ತಿಳಿಸಿ, ನಮ್ಮ ತವರಿನಲ್ಲಿ ನಡೆಯುವ ಯಾಗಕ್ಕೆ ಹೋಗೋಣ. ಇಂತಹ ದೊಡ್ಡ ಕಾರ್ಯಗಳು ನಮ್ಮ ಮನೆಯಲ್ಲಿ ನಡೆಯುವಾಗ ಮೇಲ್ವಿಚಾರಣೆಯೆಲ್ಲ ಯಾವಾಗಲೂ ನನ್ನದೇ. ನಾನಲ್ಲಿ ಇಲ್ಲದಾಗ ಬಂದವರನ್ನು ಸುಧಾರಿಸುವುದು, ಅಗತ್ಯತೆಗಳನ್ನು ಪೂರೈಸಲು ಈಗ ಅಲ್ಲಿ ಯಾರೂ ಇಲ್ಲ. ಇದರಿಂದ ತಂದೆಯವರಿಗೆ ಸಹಕರಿಸುವವರಾರು? ನಡೆಯಿರಿ ನಾವೂ ಹೋಗೋಣ ಎಂದಳು.

ಪ್ರೀತಿಯ ಪತ್ನಿಗೆ ಸಾಕಷ್ಟು ತಿಳುವಳಿಕೆ ಹೇಳಿದರೂ ಒಪ್ಪದಾದಾಗ, "ಇದೆಲ್ಲವೂ ನಮ್ಮನ್ನು ಅವಮಾನಿಸಲೆಂದೇ ಮಾಡಿದ ಏರ್ಪಾಡು ಆದ್ದರಿಂದ ಇದರಲ್ಲಿ ಭಾಗವಹಿಸುವುದರಿಂದ





ನಮಗೆ ದುಃಖಕ್ಕೆ ಹಾದಿಯಾಗುತ್ತದೆ" ಎಂದು ಎಷ್ಟು ಹೇಳಿದರೂ ಕೇಳದೇ ದುಃಖಿಸುತ್ತಿದ್ದ ಪತ್ನಿಯನ್ನು ಸಮಾಧಾನಿಸಿ, ಅದೂ ಸಾಧ್ಯವಾಗದೆ, ಅಂತಿಮವಾಗಿ ಆಕೆಗೆ ತವರಿಗೆ ಹೋಗಲು ಅನುಮತಿ ನೀಡುತ್ತಾನೆ. ಆದರೆ ಈಶ್ವರ ಶೆಟ್ಟಿಗಾರ ಹೋಗುವುದಿಲ್ಲ. ದಾಕ್ಷಾಯಿಣಿ ತನ್ನ ಪತಿಯಿಲ್ಲದೇ ತಾನೊಬ್ಬಳೇ ತವರಿಗೆ ಹೋಗಬೇಕಾಗಿ ಬಂದ ತನ್ನ ದುರ್ವಿಧಿಯನ್ನು ಹಳಿಯುತ್ತಾ, ದುಃಖದಿಂದ ತವರಿಗೆ ಪ್ರಯಾಣಿಸಿದಳು.

ತನ್ನ ಪ್ರೀತಿಯ ಸಹೋದರಿಯರು, ಮಮತೆಯ ತಾಯಿ, ತನ್ನ ಆಗಮನವನ್ನು ಕಂಡು ಆದರದಿಂದ ಸ್ವಾಗತಿಸುವರು, ತನ್ನನ್ನು ನೋಡಿ ಸಂಭ್ರಮಿಸುವರು, ಎಂಬ ಕಲ್ಪನೆಯಿಂದ ತವರಿಗೆ ಬಂದಳು. ಬರುವಾಗ ಅಲ್ಲಿಯ ತಳಿರು ತೋರಣದ ಅಲಂಕಾರಗಳು, ಬೀದಿಯನ್ನೆಲ್ಲಾ ಗುಡಿಸಿ ದೂಳು ಏಳದಂತೆ ನೀರನ್ನು ಚಿಮುಕಿಸಿ ಸುಂದರಗೊಳಿಸಿರುವುದನ್ನೆಲ್ಲಾ ಗಮನಿಸುತ್ತಾ ಯಾಗಮಂಟಪ ಪ್ರವೇಶಿಸಿದಳು ದಾಕ್ಷಾಯಿಣಿ. ದೂರದಿಂದಲೇ ಆಕೆಯನ್ನು ಗಮನಿಸಿದ ಸಹೋದರಿಯರು, ಅಲ್ಲಿಂದ ಮರೆಯಾದರು. ತಾಯಿ ತಂದೆಗೆ ವಿಷಯ ತಿಳಿಸಿದರು. ತಂದೆ ದೂತರನ್ನು ಕಳುಹಿಸಿ "ಒಳಗೆ ಬಂದು ಯಾಗ ಮಂಟಪವನ್ನು ಅಪವಿತ್ರಗೊಳಿಸಬಾರದೆಂದೂ, ಅಲ್ಲಿಂದ ದೂರ ಹೋಗಬೇಕೆಂದೂ" ಆದೇಶಿಸಿದ. ದೂತರು, ಮೊಕ್ತೇಸರರ ಮಾತನ್ನು ದಾಕ್ಷಾಯಿಣಿಗೆ ತಿಳಿಸಿದರು . ಇದುವರೆಗೆ ಕನಸನ್ನು ಕಾಣುತ್ತಾ ಬಂದವಳಿಗೆ ಒಮ್ಮೆಯೇ ತನ್ನನ್ನು ಯಾರೋ ಪ್ರಪಾತಕ್ಕೆ ತಳ್ಳಿದಂತಾಯ್ತು. ಮೂರ್ಛೆ ಹೋದಳು. ಯಾರೋ ಮುಖಕ್ಕೆ ಚಿಮುಕಿಸಿದ ನೀರಿನಿಂದ ಸಾವರಿಸಿಕೊಂಡು ಎದ್ದಳು. ಎಲ್ಲವನ್ನೂ ಸ್ಮರಿಸಿಕೊಂಡು ದುಃಖಿಸಿದಳು. ಅತ್ತ ತನ್ನ ಪತಿ ಎಷ್ಟು ಹೇಳಿದರೂ ಕೇಳದೇ ಬಲಾತ್ಕಾರದಿಂದ ಅವರನ್ನು ಒಪ್ಪಿಸಿ ಬಂದು ತಪ್ಪು ಮಾಡಿದೆ. ಮರಳಿ ಹೋಗಿ ಗಂಡನೆದುರು ಹೇಗೆ ನಿಲ್ಲಲಿ? ಎಂದು ಪ್ರಲಾಪಿಸಿದಳು. ಇಲ್ಲ, ನಾನು ಮರಳಿ ಪತಿಯೆಡೆಗೆ ಹೋಗಲಾರೆ, ಹೋಗಲೂ ಬಾರದು ಎಂದು ನಿರ್ಧರಿಸಿದಳು.

ಮನಸ್ಸು ಹಲವಾರು ದಿಕ್ಕುಗಳಲ್ಲಿ ಆಲೋಚಿಸುತ್ತಿತ್ತು. ಏನು ಮಾಡುವುದು ಎಂಬ ಆಲೋಚನೆಯಲ್ಲೇ ಗಟ್ಟಿ ಮನಸ್ಸಿನಿಂದ ಅಲ್ಲಿಂದ ಹೊರಟಳು ಹೊರಡುವ ಮೊದಲು ತಾನು ಆರಾಧಿಸುತ್ತಿದ್ದ ಬ್ರಹ್ಮಲಿಂಗೇಶ್ವರ ದೇವರಿಗೆ ಭಕ್ತಿಯಿಂದ ನಮಸ್ಕರಿಸಿದಳು. ಅವಳ ನಮಸ್ಕಾರದಲ್ಲಿ ಇದು ನನ್ನ ಕೊನೆಯ ನಮಸ್ಕಾರವೆಂಬಂತಿತ್ತು. ಮುಖ ಭಾವ ವೇದನೆಯನ್ನೆಲ್ಲಾ ತಿಳಿಸುತ್ತಿತ್ತು.

ಬಿರುನಡೆಯಿಂದ ಯಾಗಾಂಗಣದ ಹೊರನಡೆದು, ದಾಪುಕಾಲು ಹಾಕುತ್ತಾ ಸೀತಾನದಿ ತೀರಕ್ಕೆ ಬಂದಳು. ತಾಯೆ, ಈಗ ನೀನೇ ನನಗೆ ಆಸರೆ ಕೊಡಬೇಕು. ನಿನ್ನಿಂದ ಮಾತ್ರ ನನಗೆ ಸಾಂತ್ವನ ದೊರೆಯಲು ಸಾಧ್ಯ ಎಂದು ಮನದಲ್ಲೇ ಸೀತಾನದಿಯಲ್ಲಿ ಬಿನ್ನವಿಸಿಕೊಂಡಳು. ಕುಲದೇವರಾದ ಬ್ರಹ್ಮಲಿಂಗೇಶ್ವರನನ್ನು ಮತ್ತೊಮ್ಮೆ ಧ್ಯಾನಿಸಿ, "ದೇವರೇ, ಇಲ್ಲಿಯವರೆಗೆ ನಿನ್ನ ಸೇವೆ ಮಾಡಲು ಅವಕಾಶ ನೀಡಿ ಹರಸಿದ್ದೀರಿ. ಅಂತಿಮವಾಗಿ ನಿನ್ನ ಪಾದಾರವಿಂದಗಳಿಗೆ ನನ್ನನ್ನು ಅರ್ಪಿಸಿಕೋ ದೇವ" ಎಂದು ದೈನ್ಯತೆಯಿಂದ ಪ್ರಾರ್ಥಿಸಿ, ಸೀತಾನದಿಯ ಆಳವಾದ ಮಡುವಿಗೆ ದುಮುಕಿದಳು.

ಏನಾಶ್ಚರ್ಯ! ನೀರಿನ ಸ್ಪರ್ಶವಾಗಿದೆಯಷ್ಟೆ. ಹತ್ತಾರು ಅಡಿ ಆಳವಿರುವ ಸುರುಳಿಯೋಪಾದಿಯಲ್ಲಿ ತಿರುಗುವ ನೀರೊಳಗೆ ಶರೀರ ಇಳಿಯುತ್ತಿಲ್ಲ. ಯಾರೋ ಆಸರೆ ನೀಡಿದ್ದಾರೆ. ಅದ್ಯಾರೋ! ನಡುನೀರಿನಲ್ಲಿ ತನ್ನನ್ನು ಅದು ಹೇಗೆ ಹಿಡಿದಿದ್ದಾನೆ! ಒಂದಿಷ್ಟೂ ನೋವು, ಆಘಾತವಾಗಲಿಲ್ಲ! ತನಗೆ ಆಸರೆ ನೀಡಿರುವವ ಅಪರಿಚಿತನಾದ ವ್ಯಕ್ತಿ, ಯಾರೀತ! ಹಿಂದೆದೂ ಈತನನ್ನು ನಾನೆಲ್ಲೂ ನೋಡಿಲ್ಲ! ನಾನು ನೀರಿಗೆ ದುಮುಕುವ ಮೊದಲು ಇಲ್ಲಿ ಯಾರೂ ಇರಲಿಲ್ಲ. ಯಾರಿದು? ಯಾಕಾಗಿ ತನ್ನನ್ನು ತಡೆದಿದ್ದಾನೆ? ಆತ ಅದು ಹೇಗೆ ತನ್ನನ್ನು ತಡೆದಿದ್ದಾನೆ, ಎಂದೆಲ್ಲಾ ಮನದಲ್ಲೇ ಆಲೋಚಿಸುತ್ತಿರುವಾಗ, ಆ ವ್ಯಕ್ತಿಯೇ ಪ್ರಶ್ನೆ ಮಾಡುತ್ತಿದ್ದಾನೆ. "ಯಾಕೆ ಮಗಳೇ ಏನಾಯ್ತು? ನೀರಿಗ್ಯಾಕೆ ದುಮುಕಿದೆ? ನಿನಗ್ಯಾರು ತೊಂದರೆ ಕೊಟ್ಟರು?" ಎಂದು ವಿಚಾರಿಸುತ್ತಾನೆ, ಆಕೆಯನ್ನು ಹಿಡಿದ ವ್ಯಕ್ತಿ. ಸಾವರಿಸಿಕೊಂಡ ದಾಕ್ಷಾಯಿಣಿ ತನಗಾದ ಅವಮಾನವನ್ನು ತಿಳಿಸುತ್ತಾಳೆ. ಸರಿ ನಡೆ ಎಂದು ಆಕೆಯನ್ನು ಯಾಗಮಂಟಪಕ್ಕೆ ಕರೆದುಕೊಂಡು ಬರುತ್ತಾನೆ.

ಅಪರಿಚಿತನೊಡನೆ ಪುನಃ ಬಂದ ದಾಕ್ಷಾಯಿಣಿಯನ್ನು ನೋಡಿದ ದಕ್ಷ ಶೆಟ್ಟಿಗಾರ ಕೋಪಾವಿಷ್ಟನಾಗಿ, "ನಿನಗೆ ಮಾನ ಮರ್ಯಾದೆಯಿಲ್ಲವೇ? ಗಳಿಗೆಗೊಬ್ಬನೊಡನೆ ಇರುವ ನೀನು ಪುನಃ ನನ್ನ ಮುಂದೆ ಬಂದಿರುವೆಯಲ್ಲ" ಎಂದು ಅರ್ಭಟಿಸುತ್ತಾ ಶಿಕ್ಷಿಸಲು ಹೊರಡುತ್ತಾನೆ. ಆತನ ಅರ್ಭಟ ಪ್ರಾರಂಭವಾಗುತ್ತಿದ್ದಂತೆಯೇ, ಬ್ರಹ್ಮಲಿಂಗೇಶ್ವರ ದೇವರು ವೀರ ಸ್ವರೂಪ (ವೀರೇಶ್ವರ) ತಳೆದು ಕೋಪಾವಿಷ್ಟನಾಗಿ ರೌದ್ರವೂ ಬೃಹತ್ತಾದ ಗಾತ್ರದಲ್ಲೂ, ಉರಿಯುವ ಕಣ್ಣಿಳಿಂದಲೂ, ಚತುರ್ಭುಜನಾಗಿ, ಬಲಗೈಯ್ಯೊಂದರಲ್ಲಿ ಖಡ್ಗವನ್ನೂ, ಇನ್ನೊಂದರಲ್ಲಿ ತ್ರಿಶೂಲವನ್ನೂ, ಎಡಗೈಯೊಂದರಲ್ಲಿ ಗುರಾಣಿ, ಮತ್ತೊಂದರಲ್ಲಿ ಪರಶುಧಾರಣೆ ಮಾಡಿ, ಸಣ್ಣ ಕೋರೆ ಹಲ್ಲುಳ್ಳವನಾಗಿ ಪರಿವರ್ತನೆಯಾಗಿ, ಮುನ್ನುಗ್ಗಿ ತನ್ನ ಖಡ್ಗದಿಂದ ದಕ್ಷನ ಶಿರವನ್ನು ಕತ್ತರಿಸುತ್ತಾನೆ. ಕಣ್ಣು ಮುಚ್ಚಿ ತೆರೆಯುವುದರೊಳಗೆ ನಡೆದ ಈ ಘಟನೆಯಿಂದ ಗಾಬರಿಗೊಂಡ ದಕ್ಷನ ಪತ್ನಿ ಪ್ರಸೂತಿ ಹಾಗೂ ದಾಕ್ಷಾಯಿಣಿ ಮೂರ್ಛೆ ಹೋಗುತ್ತಾರೆ. ಸ್ವಲ್ಪ ಸಮಯದಲ್ಲಿ, ಯಾರೋ ಚಿಮುಕಿಸಿದ ನೀರಿನಿಂದ ಎಚ್ಚರಗೊಂಡ ದಾಕ್ಷಾಯಿಣಿ, ಪ್ರಲಾಪಿಸುತ್ತಾ ವೀರೇಶ್ವರ ದೇವರಲ್ಲಿ ಪರಿ ಪರಿಯಾಗಿ ಪ್ರಾರ್ಥಿಸುತ್ತಾಳೆ. ಕರುಣಾಮಯಿಯಾದ ವೀರೇಶ್ವರನು, ಯಾಗದಾಹುತಿಗಾಗಿ ತಂದಿದ್ದ, ಆಡಿನ ಶಿರವನ್ನು ಕತ್ತರಿಸಿ ದಕ್ಷ ಶೆಟ್ಟಿಗಾರನ ಮುಂಡಕ್ಕೆ ಸೇರಿಸುತ್ತಾನೆ ಹಾಗೂ ಜೀವ ಕಳೆ ತುಂಬುತ್ತಾನೆ.

ಮರು ಜೀವ ಪಡೆದ ದಕ್ಷ ಶೆಟ್ಟಿಗಾರ, ರೌದ್ರರೂಪದಲ್ಲಿ ತನ್ನೆದರು ನಿಂತಿರುವ ವೀರಸ್ವರೂಪಿ ಈಶ್ವರನಲ್ಲಿ ಶರಣಾಗಿ ತನ್ನ ತಪ್ಪನ್ನು ಮನ್ನಿಸಬೇಕೆಂದೂ, ದೀನನಾಗಿ ಪ್ರಾರ್ಥಿಸಿಕೊಳ್ಳುತ್ತಾನೆ. ಕರುಣಾಮಯಿ ಕುಲದೇವರು ಶ್ರೀ ಬ್ರಹ್ಮಲಿಂಗೇಶ್ವರನು, ದಕ್ಷನನ್ನು ಆಶೀರ್ವದಿಸುತ್ತಾ, ಪವಿತ್ರಳೂ ನನ್ನ ಪರಮ ಭಕ್ತಳೂ ಆದ ದಾಕ್ಷಾಯಿಣಿಯನ್ನು ನೋಯಿಸಕೂಡದೆಂದೂ, ಆಕೆ ಆಯ್ಕೆ ಮಾಡಿಕೊಂಡಿರುವ ಪತಿಯು ಆಕೆಯ ಕರ್ಮಫಲದ ಆಯ್ಕೆಯಾಗಿದ್ದು, ಅದನ್ನು ತಡೆಯುವ ಕೆಲಸ ನಿನ್ನದಲ್ಲ! ನಿನ್ನ ಕೆಲಸವನ್ನು ಮಾತ್ರ ನೀನು ನಿರ್ವಹಿಸು ಎಂದು ಆದೇಶಿಸುತ್ತಾನೆ. ಹಾಗೂ ಅಲ್ಲಿಂದ ಅದೃಶ್ಯನಾಗುತ್ತಾನೆ.

ಈ ವೃತ್ತಾಂತವನ್ನು ತಿಳಿದ ಬಾರಕೂರಿನ ರಾಜನು ದಾಕ್ಷಾಯಿಣಿಯನ್ನು ಆಸ್ಥಾನಕ್ಕೆ ಕರೆಸಿ ಸತ್ಕರಿಸಿ, ಹಲವಾರು ಉಡುಗೊರೆಗಳನ್ನು ನೀಡುತ್ತಾನೆ. ದೇವಾಲಯದಲ್ಲಿದ್ದ ಈಶ್ವರಲಿಂಗವನ್ನು (ಬ್ರಹ್ಮಲಿಂಗೇಶ್ವರ ಲಿಂಗವನ್ನು) ಜಲಾಧಿವಾಸಮಾಡಿಸಿ ಅದೇ ಪೀಠದಲ್ಲಿ ಸುಂದರವೂ ಶಾಂತ ಮುಖಚರ್ಯೆಯ, ವೀರಭದ್ರಾವತಾರದ ಮೂರ್ತಿಯನ್ನು ಪ್ರತಿಷ್ಠಾಪಿಸಿ ಕೊಡುತ್ತಾನೆ. ಆ ವಿಗ್ರಹದ ಬಲ ಭಾಗದಲ್ಲಿ ಶಿವಭಕ್ತೆಯಾದ ದಾಕ್ಷಾಯಿಣಿಯ ಪ್ರತಿ ರೂಪವನ್ನೂ, ಎಡ ಭಾಗದಲ್ಲಿ ದುರಂಹಕಾರದಿಂದ ನಡೆದರೇನಾಗುತ್ತದೆ ಎಂಬುದಕ್ಕೆ ಉದಾಹರಣೆಯಾಗಿ ಆಡಿನ ಶಿರದ ದಕ್ಷ ಶೆಟ್ಟಿಗಾರರ ಪ್ರತಿರೂಪವನ್ನೂ ಕೆತ್ತಿಸಿ, ಪ್ರತಿಷ್ಠಾಪಿಸುವ ವ್ಯವಸ್ಥೆ ಮಾಡುತ್ತಾನೆ.

ಕಾಲಾನುಕ್ರಮದಲ್ಲಿ ಬ್ರಹ್ಮಲಿಂಗೇಶ್ವರನ ಪೀಠದಲ್ಲಿ ವೀರೇಶ್ವರನನ್ನು ಪ್ರತಿಷ್ಠಾಪಿಸಿದ ಕಾರಣ "ಬ್ರಹ್ಮಲಿಂಗವೀರಭದ್ರ" ನೆಂದು ಪುನಃ ನಾಮಕರಣವಾಗುತ್ತದೆ.



**ಎಚ್.ಎ. ಗೋಪಾಲ್**
**ಮಾಜಿ ಆಡಳಿತ ಮೊಕ್ತೇಸರರು, ಶ್ರೀ ಬ್ರಹ್ಮಲಿಂಗ ವೀರಭದ್ರ,**
**ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಬಾರಕೂರು ಮತ್ತು**
**ಮಾಜಿ ಅಧ್ಯಕ್ಷರು, ದ.ಕ. ಜಿಲ್ಲಾ ಪದ್ಮಶಾಲಿ ಮಹಾಸಭಾ (ರಿ), ಮಂಗಳೂರು.**



AI generated image: No photo credits required

# ಬರಲೇ ಇಲ್ಲ

1984-1987 ನಾನು ಕೊಯಮುತ್ತೂರಿನಲ್ಲಿ ಕೆಲಸ ಮಾಡುತ್ತಿದ್ದ ಕಾಲ. ಪ್ರಥಮ ಬಾರಿಗೆ ಕನ್ನಡ ನೆಲವನ್ನು ಬಿಟ್ಟು ಹೊರರಾಜ್ಯದಲ್ಲಿ ಜೀವಿಸುವ ಅನುಭವ. ಆ ವಾತಾವರಣದಲ್ಲಿ ನಮ್ಮೂರಿನವರು ಯಾರಾದರೂ ಸಿಕ್ಕಿದರೆ ಅಥವಾ ಕನ್ನಡ ಮಾತಾಡುವವರು ಯಾರಾದರೂ ಸಿಕ್ಕಿದರೆ ನನಗಾಗುತ್ತಿದ್ದ ಸಂತೋಷ ವರ್ಣನಾತೀತ. ಅದು ಸ್ವಾಭಾವಿಕ ಕೂಡಾ.

ಒಂದು ದಿನ ಯುವಕನೊಬ್ಬ ನನ್ನನ್ನೇ ಕೇಳಿಕೊಂಡು ಬಂದ. ಅವನು ನಮ್ಮೂರಿನವನೇ ಎಂದೂ ಹೇಳಿಕೊಂಡ. ನಮ್ಮೂರಿನ ನನ್ನ ಪರಿಚಿತರಾದ ಇಬ್ಬರು ಮೂವರ ಹೆಸರೂ ಹೇಳಿದ. ಎಲ್ಲವನ್ನೂ ಸರಿಯಾಗಿಯೇ ಹೇಳಿದ್ದರಿಂದ ಅವನು ನಮ್ಮೂರಿನವನೇ ಹೌದು ಎಂಬುದು ಖಾತ್ರಿಯಾಯಿತು. ಯಾವುದೋ ಕೆಲಸದ ನಿಮಿತ್ತ ಕೊಯಮುತ್ತೂರಿಗೆ ಬಂದಿದ್ದ. ಒಂದೆರಡು ದಿನಗಳಲ್ಲಿ ಊರಿಗೆ ಹಿಂದಿರುಗಬೇಕಾಗಿತ್ತು. ಆದರೆ ಪಿಕ್ ಪಾಕೆಟ್ ಆಗಿ ಹಣವನ್ನೆಲ್ಲಾ ಕಳೆದುಕೊಂಡಿರುವುದಾಗಿ ಹೇಳಿದ. ರೈಲು ಬಸ್ಸಿನ ಖರ್ಚಿಗೂ ಹಣವಿಲ್ಲ. ಆದ್ದರಿಂದ ಸ್ವಲ್ಪ ಹಣವನ್ನು ಸಾಲವಾಗಿ ಕೊಡಬೇಕೆಂದೂ, ಊರಿಗೆ ಹೋದ ತಕ್ಷಣ ಆ ಹಣವನ್ನು ಕಳುಹಿಸಿಕೊಡುವುದಾಗಿಯೂ ಹೇಳಿದ. ಪರವೂರಿಗೆ ಬಂದು ಹೀಗೆ ಕಷ್ಟದಲ್ಲಿ ಸಿಕ್ಕಿಕೊಂಡವನಿಗೆ ಸಹಾಯ ಮಾಡುವುದು ನನ್ನ ಆದ್ಯ ಕರ್ತವ್ಯವೆಂದು ತಿಳಿದು ಅವನು ಕೇಳಿದ ಹಣವನ್ನು ಕೊಟ್ಟೆ. ಅವನೂ ನನ್ನ ವಿಳಾಸವನ್ನು ಎರಡೆರಡು ಬಾರಿ ಕೇಳಿ ಬರೆದುಕೊಂಡು, ಊರಿಗೆ ಹೋದ ಕೂಡಲೇ ಕಳುಹಿಸುತ್ತೇನೆ ಎಂದು ಎರಡೆರಡು ಬಾರಿ ಹೇಳಿ, ನನಗೆ ಮತ್ತೆ ಮತ್ತೆ ಧನ್ಯವಾದ ಹೇಳಿ ಹೊರಟುಹೋದ.

ಇದಾಗಿ ತಿಂಗಳೇ ಕಳೆದರೂ ನಾನು ಕೊಟ್ಟ ಹಣ ಮಾತ್ರ... ಬರಲೇ ಇಲ್ಲ. ನಾನೂ ಅದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಲಿಲ್ಲ. ಪಾಪ, ಕಷ್ಟದಲ್ಲಿರಬಹುದು ಎಂದುಕೊಂಡು ಸುಮ್ಮನಾದೆ. ಮುಂದೆ ಊರಿಗೆ ಹೋದಾಗ ಇದು ನೆನಪಾಗಿ ಅವನು ಹೇಳಿದ ನನ್ನ ಪರಿಚಿತರ ಮುಂದೆ ವಿಷಯ ಪ್ರಸ್ತಾಪ ಮಾಡಿದೆ. ಆದರೆ ಅವರಲ್ಲಿ ಯಾರೊಬ್ಬರೂ ಅವನ ಗುರುತು ಹಿಡಿಯಲಿಲ್ಲ.

ಇದಾಗಿ ಒಂದು ವರ್ಷವೇ ಕಳೆದಿರಬಹುದು. ಹಿಂದಿನ ಘಟನೆಯೇ ಪುನರಾವರ್ತನೆಗೊಂಡಿತು. ಆಗ ಇನ್ನೊಬ್ಬ ಯುವಕ ಬಂದು ತಾನು ನಮ್ಮೂರಿನವನೇ ಎಂದು ಹೇಳಿಕೊಂಡ. ನಮ್ಮೂರಿನ ಗುರುತುಗಳನ್ನೂ ಹೇಳಿದ. ಅವನೂ ಅದೇ ಪಿಕ್ ಪಾಕೆಟ್ ಕತೆ ಹೇಳಿ, ಊರಿಗೆ ಹಿಂತಿರುಗಲು ಸಹಾಯ ಕೇಳಿದ.

ನನಗೆ ಹಿಂದಿನ ಘಟನೆ ನೆನಪಾಯಿತು. ಆಗಲೇ ಆರಂಭವಾಗಿದ್ದು ಆಂತರಿಕ ಸಂಘರ್ಷ. ಹಿಂದಿನಂತೆ ಬೆಸ್ತುಬೀಳಬಾರದೆಂದು ಅಂತರಾತ್ಮ ಹೇಳಿತು. ಆದರೆ ಇನ್ನೊಂದು ವಿವೇಕದ ದನಿಯೂ ಎಚ್ಚರಿಸಿತು. ಹಿಂದಿನ ಬಾರಿ ಸಹಾಯದ ಹೆಸರಿನಲ್ಲಿ ನಾನು ಮೋಸ ಹೋಗಿರಬಹುದು. ಆದರೆ ಈಗ ಬಂದವನು ನಿಜವಾಗಿ ಕಷ್ಟದಲ್ಲಿದ್ದು ನನ್ನ ಸಹಾಯ ದೊರೆಯದೇ ಹೋದರೆ ಅನ್ಯಾಯ ಮಾಡಿದಂತಾಗಬಹುದು ಎಂದು ತರ್ಕಿಸಿ, ಒಂದು ನಿರ್ಧಾರಕ್ಕೆ ಬಂದು ಅವನಿಗೆ ಹೇಳಿದೆ: "ನೋಡಿ, ನೀವೇನೂ ಚಿಂತೆ ಮಾಡಬೇಡಿ. ನೀವು ಊರು ತಲುಪುವುದಕ್ಕೆ ನಾನು ಸಹಾಯ ಮಾಡುತ್ತೇನೆ. ಒಂದು ಹದಿನೈದು ನಿಮಿಷ ಇಲ್ಲಿಯೇ ಕುಳಿತಿರಿ. ನನ್ನ ಕೆಲಸದ ಮಧ್ಯೆ ಸ್ವಲ್ಪ ಬಿಡುವು ಮಾಡಿಕೊಂಡು ನಿಮ್ಮನ್ನು ರೈಲ್ವೆ ಸ್ಟೇಷನ್ ಗೆ ಕರೆದುಕೊಂಡು ಹೋಗುತ್ತೇನೆ. ಮಂಗಳೂರಿಗೆ ರೈಲ್ವೆ ಟಿಕೆಟ್ ತೆಗೆಸಿಕೊಡುತ್ತೇನೆ. ಮುಂದಿನ ಬಸ್ ಮತ್ತು ಇತರ ಖರ್ಚಿಗೂ ಹಣ ಕೊಡುತ್ತೇನೆ."

ಅವನು ಒಪ್ಪಿದ ಮತ್ತು ಅಲ್ಲಿಯೇ ಕುಳಿತುಕೊಂಡ. ಒಂದೈದು ನಿಮಿಷ ಬಿಟ್ಟು ಪುನಃ ನನ್ನ ಹತ್ತಿರ ಬಂದು, ಅಲ್ಲಿಯೇ ಹೊರಗೆ ಹೋಗಿ ನಾನು ಹೊರಡುವ ಸಮಯದ ಮೊದಲು ಹಿಂತಿರುಗಿ ಬರುವುದಾಗಿ ಹೇಳಿ ಹೋದ.

ನನಗೂ ನಾನೊಂದು ಒಳ್ಳೆಯ ಕೆಲಸ ಮಾಡುತ್ತಿದ್ದೇನೆ ಎಂಬ ಸಮಾಧಾನ. ಜೊತೆಗೆ ಏನೋ ಸತ್ಕಾರ್ಯ ಮಾಡುತ್ತಿದ್ದೇನೆ ಎಂಬ ಅಹಂ ಕೂಡಾ ಚಿಗುರಿಕೊಂಡಿತೆನ್ನಿ. ಬೇಗಬೇಗನೆ ಆಫೀಸಿನಲ್ಲಿ ಬೇಕಾದ ವ್ಯವಸ್ಥೆಗಳನ್ನೆಲ್ಲಾ ಮಾಡಿ, ಬಿಡುವು ಮಾಡಿಕೊಂಡು ಅವನಿಗಾಗಿ ಕಾಯತೊಡಗಿದೆ. ಆದರೆ ಅವನು... ಬರಲೇ ಇಲ್ಲ!

(ಅನುಭವ)



ನಾರಾಯಣ ಶೆಟ್ಟಿಗಾರ್,
ವಿಶ್ವಪ್ರಿಯನಗರ, ಬೆಂಗಳೂರು



# ನೀವು ದೇವರೇ?

AI generated image: No photo credits required

ಬೆಂಗಳೂರಿನ ಅದೊಂದು ಉದ್ಯಾನವನದಲ್ಲಿ ಒಬ್ಬ ಬಾಲಕ ಅಲ್ಲಿಗೆ ಬಂದು ಹೋಗುವ ಎಲ್ಲರಲ್ಲಿಯೂ "ನೀವು ದೇವರೇ?" ಎಂದು ಕೇಳುತ್ತಿದ್ದ. ಆದರೆ ಅವನನ್ನು ಯಾರೂ ಲೆಕ್ಕಿಸದೆ ಯಾರೋ ತಲೆಹರಟೆ ಹುಡುಗನೆಂದು ಪಕ್ಕಕ್ಕೆ ತಳ್ಳುತ್ತಿದ್ದರು. ಆದರೆ ಅದೇ ಪಾರ್ಕಿನಲ್ಲಿ ಕುಳಿತಿದ್ದ ವಯಸ್ಕರೊಬ್ಬರು ಬಾಲಕನನ್ನು ಗಮನಿಸಿದರು. ಅವರಲ್ಲಿಗೂ ಬಾಲಕ ಹೋಗಿ "ನೀವು ದೇವರೇ?" ಎಂದು ಕೇಳಿದ. ಅವರು ಆ ಹುಡುಗನ ಮುಖವನ್ನೇ ಒಮ್ಮೆ ದಿಟ್ಟಿಸಿ ನೋಡಿದರು. ಅವನಲ್ಲಿ ಬಡತನದ ಛಾಯೆಯಿತ್ತು. ದುಗುಡವಿತ್ತು. ನೋವಿತ್ತು. ಮೇಲಾಗಿ ಅವನಲ್ಲಿ ಮುಗ್ಧತನ ಎದ್ದು ಕಾಣುತಿತ್ತು. ಅವರು ಅವನನ್ನು ಹತ್ತಿರ ಕರೆದು

"ನಿನಗೆ ದೇವರು ಯಾಕೆ ಬೇಕು?" ಎಂದು ಕೇಳಿದರು.

ಅದಕ್ಕೆ ಬಾಲಕ "ತಾತ, ನಾನು ಪುಟ್ಟು ಅಂತ. ನಾನು ಮತ್ತೆ ನನ್ನಮ್ಮ ಇಲ್ಲೇ ಪುಟ್ಟ ಮನೆಯಲ್ಲಿ ಜೀವಿಸುತ್ತಿದ್ದೇವೆ. ನನಗೆ ಅಮ್ಮನನ್ನು ಬಿಟ್ಟರೆ ಇನ್ಯಾರೂ ಇಲ್ಲ. ಅವಳು ಅಲ್ಲಿಲ್ಲಿ ಕೂಲಿ ಮಾಡಿಕೊಂಡು ನನ್ನನ್ನು ಸಾಕುತ್ತಿದ್ದಳು. ಆದರೆ ಇಂದು ಬೆಳಿಗ್ಗೆ ನನ್ನಮ್ಮ ಇದ್ದಕ್ಕಿದ್ದಂತೆ ಎದೆನೋವೆಂದು ಕುಸಿದುಬಿದ್ದಳು. ಅವರಿವರ ಸಹಾಯದಿಂದ ನಾನು ಅಮ್ಮನನ್ನು ಅಲ್ಲಿರುವ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಆದರೆ ಆಸ್ಪತ್ರೆಯವರು ನನ್ನಮ್ಮನನ್ನು ಪರೀಕ್ಷಿಸಿ 'ಅವಳನ್ನು ಬದುಕಿಸಲು ಆ ದೇವರೇ ಬರಬೇಕು' ಅಂತ ಹೇಳಿ ಹೊರಗೆ ಮಲಗಿಸಿದ್ದಾರೆ. ಅದಕ್ಕೆ ನಾನು ಆ ದೇವರಿಗೋಸ್ಕರ ಎಲ್ಲ ಕಡೆ ಹುಡುಕುತ್ತಿದ್ದೇನೆ. ಹೇಳಿ, ನೀವು ದೇವರೇ?" ಎಂದು ದೈನ್ಯತೆಯಿಂದ ಕೇಳಿದ.

ಆ ಬಾಲಕನ ಮುಗ್ಧತನದ ಮಾತನ್ನು ಕೇಳಿದ ತಾತನಿಗೆ ಕರುಣೆ ಹುಟ್ಟಿತು. ಆದರೆ ಅದನ್ನು ತೋರ್ಪಡಿಸದೆ "ನೋಡು ಪುಟ್ಟು, ನಾನು ದೇವರಲ್ಲ. ಆದರೆ ದೇವರು ಎಲ್ಲಿದ್ದಾರೆ, ಅಂತ ನನಗೆ ಗೊತ್ತು. ನಾನು ಆ ದೇವರಿಗೆ ನಿನ್ನಮ್ಮನನ್ನು ಬದುಕಿಸಲು ಆಸ್ಪತ್ರೆಗೆ ಹೋಗಲು ಹೇಳ್ತೇನೆ. ನೀನು ತಕ್ಷಣ ಅಮ್ಮನ ಬಳಿಗೆ ಹೋಗು" ಎಂದು ಪುಟ್ಟುವಿನ ಬೆನ್ನು ಸವರಿ ಕಳುಹಿದರು. ಅವರ ಮಾತನ್ನು ಕೇಳಿ ಸಂತೋಷದಿಂದ ಪುಟ್ಟು "ಹ್ಹೋ! ದೇವರು ಬರ್ತಾರೆ... ನನ್ನಮ್ಮನನ್ನು ಬದುಕಿಸಲು ದೇವರು ಬರ್ತಾರೆ...!" ಎಂದು ಕೇಕೆ ಹಾಕುತ್ತಾ ಆಸ್ಪತ್ರೆಯ ಕಡೆಗೆ ಓಡಿದ. ಅವನೆಡೆಗೆ ಸಹಾನುಭೂತಿಯಿಂದ ನೋಡುತ್ತಾ ತಾತ ತನ್ನ ಮೊಬೈಲಿನಲ್ಲಿ ಯಾರಿಗೋ ಫೋನ್ ಮಾಡಿದ್ರು.

ಇತ್ತ ಆ ಬಾಲಕ ಆಸ್ಪತ್ರೆಯ ಹೊರಗೆ ಜೀವನ್ಮರಣದ ಮಧ್ಯೆ ಹೋರಾಡುತ್ತಿದ್ದ ಅಮ್ಮನನ್ನು ಕಂಡು "ಅಮ್ಮಾ, ನನಗೆ ಪಾರ್ಕಿನಲ್ಲಿ ಒಬ್ಬ ತಾತ ಸಿಕ್ಕಿದ್ರು. ಅವರಿಗೆ ದೇವರು ಎಲ್ಲಿದ್ದಾರೆ ಅಂತ ಗೊತ್ತಂತೆ. ನಿನ್ನನ್ನು ಬದುಕಿಸಲು ಅವರು ದೇವರನ್ನು ಇಲ್ಲಿಗೆ ಕಳುಹಿಸುತ್ತಾರಂತೆ" ಎಂದು ಆಕೆಗೆ ಸಮಾಧಾನ ಮಾಡಿದಾಗ, ಆ ತಾಯಿಯು ಹತಾಶೆಯಿಂದ ಕಣ್ಣೀರು ಸುರಿಸಿದಳು. ಆಗ ಇದ್ದಕ್ಕಿದ್ದಂತೆ ಡಾಕ್ಟರುಗಳ ತಂಡ ಅಲ್ಲಿಗೆ ಬಂದು ಆಕೆಯನ್ನು ಸ್ಟ್ರೆಚರಿನಲ್ಲಿ ಮಲಗಿಸಿ ಐಸಿಯು ಒಳಗೆ ಕರೆದುಕೊಂಡು ಹೋದರು. ಅದಾಗಿ ಕೆಲವು ಸಮಯದಲ್ಲಿ ಆ ಆಸ್ಪತ್ರೆಗೆ ಬೆಂಗಳೂರಿನ ಸುಪ್ರಸಿದ್ಧ ಹೃದಯತಜ್ಞರು ಆಗಮಿಸಿದರು.

ಅದಾಗಿ ಕೆಲದಿನಗಳ ನಂತರ ಆಕೆ ಸಂಪೂರ್ಣವಾಗಿ ಗುಣಮುಖಳಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗುತ್ತಿರಬೇಕಾದ್ರೆ, ಅಲ್ಲಿಗೆ ಅದೇ ತಾತ ಆ ಆಸ್ಪತ್ರೆಯ ಮಂಡಳಿಯವರ ಜೊತೆಗೆ ಆಗಮಿಸಿದರು. ಅವರನ್ನು ನೋಡಿದ ಬಾಲಕ ಆನಂದಾತಿಶಯನಾಗಿ "ಅಮ್ಮ, ಅಮ್ಮ... ಇವರೇ ನಿನ್ನನ್ನು ಬದುಕಿಸಲು ದೇವರನ್ನು ಕಳುಹಿಸಿದವರು!" ಎಂದು ಸಂಭ್ರಮದಿಂದ ಕುಣಿದು ಕುಪ್ಪಳಿಸಿದ. ತಾತನನ್ನು ಕಂಡು ಆ ಮಾತೆ ಕೈಜೋಡಿಸಿದಳು.

"ಮಹಾಶಯರೇ, ನಾನು ಕನಸಿನಲ್ಲಿಯೂ ಊಹಿಸದ ರೀತಿಯಲ್ಲಿ ಈ ಆಸ್ಪತ್ರೆಯಲ್ಲಿ ನನಗೆ ಅತ್ಯುತ್ತಮ ಚಿಕಿತ್ಸೆ ಸಿಕ್ಕಿದೆ. ಆದರೆ ನೀವು ಕಳುಹಿಸಿದ ದೇವರು ಯಾರೆಂದು ಗೊತ್ತಾಗಲಿಲ್ಲ. ಅವರು ಯಾರೆಂದು ಗೊತ್ತಾದರೆ ನಾನು ಬದುಕಿರುವಷ್ಟು ದಿವಸ ಅವರ ಹೆಸರಿನಲ್ಲಿ ತುಪ್ಪದ ದೀಪ ಹಚ್ಚುತ್ತೇನೆ" ಎಂದು ನಮ್ರತೆಯಲ್ಲಿ ನುಡಿದಳು.

ಅದನ್ನು ಕೇಳಿ ಆ ತಾತನ ಜೊತೆಗೆ ಇದ್ದ ಆಸ್ಪತ್ರೆಯ ಆಡಳಿತಾಧಿಕಾರಿ "ಅಮ್ಮಾ, ನಮ್ಮ ದೇಶದ ಆಗರ್ಭ ಶ್ರೀಮಂತರಲ್ಲಿ ಒಬ್ಬರಾದ ಇವರು ಈ ಆಸ್ಪತ್ರೆಯ ಯಜಮಾನರಿಗೆ ಫೋನ್ ಮಾಡಿ ನಿಮಗೆ ಪ್ರಖ್ಯಾತ ಹೃದಯತಜ್ಞರಿಂದ ಅಪರೇಶನ್ ಮಾಡಿಸಿದ್ದಲ್ಲದೆ ಎಲ್ಲ ಸೌಲಭ್ಯವನ್ನು ಅವರ ದುಡ್ಡಿನಲ್ಲೇ ಕೊಡಿಸಿದರು" ಎಂದರು.

ಅದನ್ನು ಕೇಳಿ ಆಕೆ ಗದ್ಗದಿತಳಾಗಿ ಮಾತುಗಳು ಕಟ್ಟಿಹೋಗಿ ಕಣ್ಣಂಚಿನಲ್ಲಿ ನೀರು ತುಂಬಿಕೊಂಡು "ನೀವೇ ನನ್ನ ಪಾಲಿನ ದೇವರು" ಎಂದು ಅವರ ಪಾದಕ್ಕೆ ಸಾಷ್ಟಾಂಗ ನಮಸ್ಕರಿಸಿದಳು.

ಆಗ ತಾತ ಅವಳನ್ನು ಮೇಲೆತ್ತಿ "ನೋಡು ತಾಯಿ, ನೀನು ಮಾರಣಾಂತಿಕ ಹೃದಯ ಕಾಯಿಲೆಯಿಂದ ಪೂರ್ಣವಾಗಿ ಗುಣಮುಖಳಾಗಲು ಕಾರಣ ನಿನ್ನ ಈ ಪುಟ್ಟ ಅವನಂದು ಬಂದು ನನ್ನನ್ನು 'ನೀವು ದೇವರೇ?' ಎಂದು ಮುಗ್ಧವಾಗಿ ಕೇಳಿದ್ದರಿಂದ ನಿನಗೆ ಈ ಆಸ್ಪತ್ರೆಯಲ್ಲಿ ವೈದ್ಯಕೀಯ ನೆರವು ನೀಡುವುದಕ್ಕೆ ನನಗೆ ದೈವಪ್ರೇರಣೆಯಾಯಿತು. ಹಾಗಾಗಿ ನಿನಗೋಸ್ಕರ ನಾನು ಸುಪ್ರಸಿದ್ಧ ಹೃದಯತಜ್ಞರನ್ನೇ ಇಲ್ಲಿಗೆ ಕರೆಸಿ ಚಿಕಿತ್ಸೆ ಕೊಡಿಸಿದೆ. ಹಾಗಾಗಿ ನಿನ್ನ ಪಾಲಿನ ದೇವರು ನಿನ್ನ ಈ ಮುಗ್ಧ ಮಗನೇ ಹೊರತು ನಾನಲ್ಲ!" ಎಂದರು.

*(ಒಂದು ಆಂಗ್ಲ ಮೆಸ್ಸೇಜ್ ಪ್ರೇರಿತ)*



**ರಮೇಶ್ ಶೆಟ್ಟಿಗಾರ್ ಮಂಜೇಶ್ವರ**
**ಸುಂದರ್‌ರಾಮ್ ಶೆಟ್ಟಿ ನಗರ,**
**ಬೆಂಗಳೂರು**


AI generated image: No photo credits required

# ಪುಷ್ಪಕ ವಿಮಾನ

ಚಿನ್ನಹಳ್ಳಿ ಹೆಸರಿಗೆ ತಕ್ಕಂತೆ ಚಿನ್ನದ ಹಳ್ಳಿಯೇ ಆಗಿತ್ತು. ಆ ನೆಲದ ಮಣ್ಣಿಗೆ ಚಿನ್ನದ ಗುಣ ಇದೆ. ಯಾವ ಗಿಡವನ್ನು ಆ ಮಣ್ಣಿನಲ್ಲಿ ನೆಟ್ಟರೂ, ಅದು ಹುಲುಸಾಗಿ ಬೆಳೆದು ನಿಲ್ಲುತ್ತಿತ್ತು. ಯಾವ ಕೃತಕ ಗೊಬ್ಬರವೂ ಬೇಡ, ಏನೂ ಬೇಡ. ಆ ಹಳ್ಳಿಯ ಜನರು ತಮ್ಮ ತಮ್ಮ ಮನೆ, ತೋಟ, ಗದ್ದೆ, ಹೊಲ ಅಂತ ಸ್ವಾಭಾವಿಕ ರೀತಿಯಲ್ಲಿ ಕೃಷಿ, ತೋಟ ಮಾಡಿಕೊಂಡು ಸುಖವಾಗಿದ್ದರು. ನಾಗರಿಕತೆಯ ಸೋಗು ಅಲ್ಲಿಗೆ ಇನ್ನೂ ಬಂದಿರಲಿಲ್ಲ. ಆದರೆ ಪಕ್ಕದ ಬೆಟ್ಟದಲ್ಲಿರುವ ಮರಗಳೆಲ್ಲ ನಿಧಾನವಾಗಿ ಕಾಣೆಯಾಗಿ, ಆ ಬೆಟ್ಟ ಈಗ ಪೂರ್ತಿ ಬೋಳಾಗಿ ನಿಂತಿದೆ. ಈ ಹಳ್ಳಿಯ ಜನರು ಈ ವಿಷಯದಲ್ಲಿ ಅಷ್ಟು ಆಸಕ್ತಿ ವಹಿಸಲಿಲ್ಲ. ಯಾಕೆಂದರೆ ಅವರು ತಮ್ಮ ಸಂತೃಪ್ತ ಜೀವನದಿಂದ ಸುಖವಾಗಿದ್ದರು. ಹೆಚ್ಚಿನ ಆಸೆ ಆ ಜನರಲ್ಲಿ ಇರಲಿಲ್ಲ. ಯಾವ ರೀತೀಯ ರೋಗರುಜಿನಗಳೂ ಆ ಜನರನ್ನು ಅಷ್ಟಾಗಿ ಕಾಡುತ್ತಿರಲಿಲ್ಲ. ಒಟ್ಟಾರೆ ತುಂಬು ನೆಮ್ಮದಿಯಿಂದ ಜನ ಬಾಳುತ್ತಿದ್ದರು.

ಆ ಬೋಳು ಬೆಟ್ಟದಲ್ಲಿ ನೆಲವನ್ನು ಸಮತಟ್ಟು ಮಾಡಿ ಗೇರು ಬೀಜದ ಸಸಿಗಳನ್ನು ನೆಡುವ ಕಾರ್ಯ ಶುರು ಆಯಿತು. ಕಾಡು ಕಡಿದ ಜನ ಕಾಡು ಬೆಳೆಸುತ್ತಾ ಇದ್ದಾರೆ. ಒಳ್ಳೆಯದೇ ಆಯಿತು ಎಂದು ಚಿನ್ನಹಳ್ಳಿಯ ಜನರು ಸಂತೋಷಪಟ್ಟರು. ಗೇರು ಗಿಡಗಳು ಹುಲುಸಾಗಿ ಬೆಳೆದು ಫಲ ಕೊಡತೊಡಗಿದವು. ಮೊದಲೆರಡು ವರ್ಷ ಚೆನ್ನಾಗಿಯೇ ಲಾಭವನ್ನು ತಂದ ಗೇರುಗುಡ್ಡೆ ನಿಧಾನವಾಗಿ ಯಾವುದೋ ರೋಗಕ್ಕೆ ತುತ್ತಾಗಿ ಇಳುವರಿ ಕಮ್ಮಿಯಾಯಿತು. ಲಾಭದ ರುಚಿ ಕಂಡ ಜನ ಸುಮ್ಮನಿರುತ್ತಾರೆಯೆ? ಕೂಡಲೇ ಹೆಲಿಕಾಪ್ಟರ್ ಆ ಊರಿನಲ್ಲಿ ಬಂದು ಇಳಿಯಿತು. ಯಾವತ್ತೂ ಬಸ್ ಕಾರುಗಳನ್ನು ಬಿಟ್ಟು ಬೇರೆ ವಾಹನಗಳನ್ನು ನೋಡದ ಜನ ಹೆಲಿಕಾಪ್ಟರ್ ನ್ನು ನೋಡಿ ದೇವಲೋಕದ ಪುಷ್ಪಕವಿಮಾನವೇ ತಮ್ಮ ಊರಿಗೆ ಬಂದಿದೆ ಅನ್ನುವಷ್ಟು ಸಂತೋಷಪಟ್ಟರು. ಸಂಭ್ರಮದಿಂದ ಹೆಲಿಕಾಪ್ಟರ್ ಹಾರಾಟವನ್ನು ವೀಕ್ಷಿಸತೊಡಗಿದರು. ಆ ಗೇರುಗುಡ್ಡೆಯ ಮೇಲೆ ಹಲವಾರು ಸುತ್ತು ಸುತ್ತಾಡಿ ಹೆಲಿಕಾಪ್ಟರ್ ದೂರ ಹಾರಿ ಹೋಯಿತು. ಜನರು ಅದರ ಅಂದ ಚಂದ, ಶಬ್ಧ, ಅದು ಹೇಗೆ ಹಾರುತ್ತದೆ, ಹಾಗೆ, ಹೀಗೆ ಅಂತ ತುಂಬಾ ದಿನ ಅದರದ್ದೇ ಗುಣಗಾನದ ಅಮಲಿನಲ್ಲಿ ಇದ್ದರು. ಹೀಗೆ ಹೆಲಿಕಾಪ್ಟರ್ ಆ ಊರಿಗೆ ಬರುವುದು ಹೋಗುವುದು ಆ ಹಳ್ಳಿಗೆ ಒಂದು ಪ್ರತಿಷ್ಠೆಯ ವಿಷಯವಾಯಿತು.

ಆ ವರ್ಷ ಅಧಿಕ ಇಳುವರಿಯ ಜೊತೆಗೆ ಹಳ್ಳಿಯ ಜನರಿಗೆ ಗೇರುಹಣ್ಣೂ ಪುಷ್ಕಳವಾಗಿ ದೊರೆಯಿತು. ಗೇರು ಮರ ಬೆಳೆಸುವವರಿಗೆ ಬರೀ ಗೇರುಬೀಜ ಸಾಕಾಗಿತ್ತು. ರುಚಿಯಾದ ಗೇರುಹಣ್ಣನ್ನು ಸವಿದ ಜನರು ಅದನ್ನು ಕೊಟ್ಟವರನ್ನು ಕೃತಜ್ಞತೆಯಿಂದ ನೆನೆದರು.

ಆದರೆ... ಅರೆ ಇದೇನು! ರೋಗವನ್ನೇ ಕಾಣದ ಹಳ್ಳಿಯಲ್ಲಿ ಈಗ ಪ್ರತಿಯೊಂದು ಮನೆಯಲ್ಲೂ ಹಾಹಾಕಾರ ಏಳುತ್ತಿದೆ. ಮನೆಯ ಹಿರಿಯ ತಿಳಿಯದ ರೋಗಕ್ಕೆ ಬಲಿಯಾದರೆ, ಹುಟ್ಟಿದ ಎಳೆಕಂದ ತನಗೆ ಈ ಲೋಕದ ನಂಟೇ ಬೇಡ ಎಂದು ಹೊರಟುಹೋಗುತ್ತಿದೆ. ಶಾಲೆಗೆ ಹೋಗುತ್ತಿರುವ ಮಕ್ಕಳಿಗೆ ನಡೆದಾಡಲು, ಓಡಾಡಲು ಕಷ್ಟ ಆಗುತ್ತಿದೆ. ನಿಧಾನವಾಗಿ ಕೈಬೆರಳು ಕಾಲುಗಂಟೂ ಹೇಗೆಂದರೆ ಹಾಗೆ ಮುರುಟಿಕೊಳ್ಳುತ್ತಿದೆ. ಭಯಂಕರ ತುರಿಕೆಯಿಂದ ಜನ ಕಂಗಾಲಾಗುತ್ತಿದ್ದಾರೆ. ಯಾರ ಮನೆಯಲ್ಲಿ ಎಷ್ಟು ಜನರಿಗೆ ಹೀಗಾಗುತ್ತಿದೆ, ಉಳಿದವರು ಹೇಗಿದ್ದಾರೆ ಎಂದು ವಿಚಾರಿಸುವವರೇ ಇಲ್ಲ. ಎಲ್ಲಾ ಮನೆಗಳ ಪರಿಸ್ಥಿತಿ ಒಂದೇ ಆಗಿದೆ. ಜನರು ಕಂಗೆಡುತ್ತಿದ್ದಾರೆ. ಪಕ್ಕದ ಊರಿನ ಆಸ್ಪತ್ರೆ ತುಂಬಿ ತುಳುಕಾಡುತ್ತಾ ಇದೆ. ವೈದ್ಯರಿಗೆ ಇದು ಯಾವ ರೋಗ ಎಂಬುದೇ ಸಮಸ್ಯೆ ಆಗ್ತಾ ಇದೆ.

ಯಾಕೆ ಈ ರೀತಿ ಜನರು ನರಳುತ್ತಿದ್ದಾರೆಂದು ತಿಳಿಯಲು ಸರ್ಕಾರದ ಕಡೆಯಿಂದ ಒಂದು ನಿಯೋಗ ನೇಮಕವಾಯಿತು. ತಜ್ಞರು ಬಂದು ಕೆರೆನೀರು, ಬಾವಿನೀರು, ಹೊಳೆನೀರು, ಅಲ್ಲಿ ಬೆಳೆದ ಬೆಳೆಗಳು ಮತ್ತು ಗೇರುಹಣ್ಣು ಎಲ್ಲವನ್ನೂ ಪರೀಕ್ಷಿಸಿದ ಮೇಲೆ ಫಲಿತಾಂಶ ಹೊರಗೆ ಬಂತು. ಆ ಗೇರು ಮರಗಳಿಗೆ ಹೆಲಿಕಾಪ್ಟರ್ ಮೂಲಕ ಸಿಂಪಡಿಸಿದ ಕ್ರಿಮಿನಾಶಕ ಇಷ್ಟೆಲ್ಲಾ ಅವಾಂತರಕ್ಕೆ ಕಾರಣ ಎನ್ನುವ ಸತ್ಯ ತಿಳಿದ ಜನರು ಹತಾಶರಾಗಿ ಹೋದರು. ಯಾವ ಹೆಲಿಕಾಪ್ಟರ್ ನ ಆಗಮನದಿಂದ ಅತ್ಯಂತ ಸಂತೋಷ ಅನುಭವಿಸಿದ ಅದೇ ಜನರು ಈಗ ತಮ್ಮ ಸುಂದರ ಸ್ವರ್ಗದಂತಿದ್ದ ಹಳ್ಳಿಯನ್ನು ನರಕ ಮಾಡಿದುದಕ್ಕಾಗಿ ಆ ಪುಷ್ಪಕ ವಿಮಾನವನ್ನು ಹಳಿಯತೊಡಗಿದರು. ದುಡ್ಡಿರುವ ಸಿರಿವಂತರ ಬಾಯಿಚಪಲವನ್ನು ತೀರಿಸಿ ಬೊಗಸೆ ತುಂಬಾ ದುಡ್ಡು ಮಾಡುವ ವ್ಯಾಪಾರಿವರ್ಗದ ದುರಾಸೆಗೆ ಮುಗ್ಧ ಹಳ್ಳಿಯ ಜನರು ಬಲಿಯಾದರು.



**ಪ್ರೇಮ ನಾರಾಯಣ**
**ವಿಶ್ವಪ್ರಿಯನಗರ, ಬೆಂಗಳೂರು**





# ಬಡಗುತಿಟ್ಟಿನ ಯಕ್ಷರಂಗದ ಮಾಸ್ ಹೀರೋ ಪ್ರಸನ್ನ ಶೆಟ್ಟಿಗಾರ್ ಮಂದಾರ್ತಿ



ಕರಾವಳಿಯ ಯಕ್ಷರಂಗದ ಬಡಗುತಿಟ್ಟಿನ ಕ್ಷೇತ್ರವನ್ನು ಆಳಿದ ದಿಗ್ಗಜರುಗಳ ಭವ್ಯ ಪರಂಪರೆಯೇ ನಮ್ಮ ನಡುವೆ ಇದೆ. ಅದೀಗ ಇತಿಹಾಸವೂ ಹೌದು. ಆ ಇತಿಹಾಸ ಪುಟಗಳಿಗೆ ಮತ್ತೆ ಇನ್ನಷ್ಟು ಸಾಧನೆಗಳನ್ನು ಸೇರಿಸಲು ಯಕ್ಷರಂಗದಲ್ಲಿ ಸಾಧನೆಯಿಂದ ಬೆಳೆಯುತ್ತಿರುವ ಕಲಾವಿದರು ನೂರಾರು ಮಂದಿ ನಮ್ಮಲ್ಲಿದ್ದಾರೆ. ಅದರಲ್ಲಿಯೂ ಯುವ ಕಲಾವಿದರ ಸಾಲಿನಲ್ಲಿ ಭರವಸೆಯ ಕಲಾವಿದರ ಪೈಕಿ ಸಾಲಿಗ್ರಾಮ ಡೇರೆ ಮೇಳದ ಬಡಗಿನ ಪರಂಪರೆಯ ಪ್ರಧಾನ ವೇಷಧಾರಿ ಪ್ರಸನ್ನ ಶೆಟ್ಟಿಗಾರ್ ಮಂದಾರ್ತಿ ಇವರ ಬಗ್ಗೆ ತಿಳಿದುಕೊಳ್ಳೋಣ.

ಯಕ್ಷಗಾನದಲ್ಲಿ ಪ್ರಬುದ್ಧ ಕಲಾವಿದ ಎಂಬ ಹೆಗ್ಗಳಿಕೆ ಪಡೆಯಲು ಹಲವು ಅರ್ಹತೆಗಳಿವೆ. ಆಳಂದ ನಿಲುವು, ಶ್ರುತಿಬದ್ಧ ಸ್ವರ, ವೇಷಭೂಷಣ ಕಟ್ಟುವ ಕೌಶಲ್ಯ, ಗತ್ತು- ಗಾಂಭೀರ್ಯ, ಪೌರಾಣಿಕ ಕಥಾ ವಸ್ತುಗಳ ಆಳಜ್ಞಾನ, ಲಯಬದ್ಧತೆ, ಆಕರ್ಷಕ ಶರೀರ ಮತ್ತು ಅಭಿನಯದಲ್ಲಿ ಆಂಗಿಕ, ಆಹಾರ್ಯ, ವಾಚಿಕ, ಸಾತ್ವಿಕತೆ - ಈ ಎಲ್ಲಾ ವಿಭಾಗಗಳಲ್ಲಿಯೂ ಪರಿಪೂರ್ಣ ಕಲಾವಿದ ಎಂದೆನಿಸಿಕೊಂಡ ಪ್ರಸನ್ನ ಶೆಟ್ಟಿಗಾರ್ ಅವರು ತನ್ಮೂಲಕ ಯಕ್ಷ ಪ್ರೇಕ್ಷಕರನ್ನು ಸೆಳೆಯುತ್ತಿದ್ದಾರೆ.

ಇವರು ಒಡ್ಡೋಲಗ ವೇಷ, ಮೂರನೇ ವೇಷ, ಪುರುಷವೇಷ ಹೀಗೆ ಹಂತ ಹಂತವಾಗಿ ಹಿರಿಯರ ಒಡನಾಟದಿಂದಲೇ ಪಳಗಿ ಬಡಗಿನ ಪ್ರಸಿದ್ಧ ಸಾಲಿಗ್ರಾಮ ಡೇರೆ ಮೇಳದಲ್ಲಿ ಪ್ರಧಾನ ವೇಷಧಾರಿಯಾಗಿ ಬಡ್ತಿ ಹೊಂದಿ, ಯಕ್ಷಾಭಿಮಾನಿಗಳ ಮಾಸ್ ಹೀರೋ ಆಗಿ ಗುರುತಿಸಿಕೊಂಡಿದ್ದಾರೆ. ಬಳ್ಕೂರು ಕೃಷ್ಣಯಾಜಿ, ಕೊಂಡದಕುಳಿ, ಜಲವಳ್ಳಿ ಅವರ ನಾಯಕ ಮತ್ತು ಖಳನಾಯಕನ ಪಾತ್ರದಂತೆ ಇವರು ಅದೇ ಸಾಲಿನಲ್ಲಿ ಸಮರ್ಥವಾಗಿ ಪಾತ್ರ ನಿರ್ವಹಿಸುತ್ತಿದ್ದಾರೆ.

ಪ್ರಸನ್ನ ಶೆಟ್ಟಿಗಾರ್ ಅವರು ಬಡಗಿನ ಎಲ್ಲಾ ತರದ ಪುರುಷ ವೇಷಗಳನ್ನು ನಿರ್ವಹಿಸಿದವರು. ಗದಾಯುದ್ಧದ ಕೌರವ, ಭೀಮ, ಕೀಚಕ, ದುಶ್ಶಾಸನ, ಕಾರ್ತವೀರ್ಯ, ಚಕ್ರ ಚಂಡಿಕೆಯ ಬರ್ಬರೀಕ, ಬಬ್ರುವಾಹನ, ಶ್ರೀದೇವಿ ಮಹಾತ್ಮೆಯ ವಿಷ್ಣು, ರುದ್ರಕೋಪ, ಹರಿಶ್ಚಂದ್ರ, ಕೃಷ್ಣ, ಭೀಷ್ಮ, ಕರ್ಣ, ರಾಮ, ಅರ್ಜುನ, ಸಾಲ್ವ ಇವರು ಅಭಿನಯಿಸಿದ ಪ್ರಸಿದ್ಧ ಪಾತ್ರಗಳು.ಇವರ ಅಭಿನಯದಲ್ಲಿ ಬಡಾಬಡಗಿನ ಕಲಾವಿದರ ಚಿರಮುದ್ರೆ ಕಾಣಬಹುದಾಗಿದೆ.

ಪ್ರಸನ್ನ ಅವರು ಬಡಗಿನ ಖ್ಯಾತ ಸ್ತ್ರೀ ವೇಷಧಾರಿ ಶಶಿಕಾಂತ್ ಶೆಟ್ಟಿ ಅವರ ಚಂದ್ರಮತಿ - ಸತ್ಯ ಹರಿಶ್ಚಂದ್ರ, ದಕ್ಷ ಯಜ್ಞದಲ್ಲಿ ಈಶ್ವರ - ದಾಕ್ಷಾಯಿಣಿ ಪಾತ್ರಗಳ ಭಾವಪೂರ್ಣ ಅಭಿನಯದಿಂದ ಪ್ರೇಕ್ಷಕರ ಮನ ಗೆದ್ದಿದ್ದಾರೆ. ಪ್ರತಿರೋಧ ವೇಷಧಾರಿಯಾಗಿ ದ್ರೌಪದಿ ಪ್ರತಾಪದಲ್ಲಿ ಅರ್ಜುನ, ಕೃಷ್ಣಾರ್ಜುನದಲ್ಲಿ ಸುಭದ್ರೆ - ಅರ್ಜುನ, ಭೀಷ್ಮ ವಿಜಯದ ಸಾಲ್ವ- ಅಂಬೆ ಪಾತ್ರದಲ್ಲಿ ಈ ಜೋಡಿಯಿಂದ ಇನ್ನಷ್ಟು ಕೀರ್ತಿ ಸಂಪಾದಿಸಲು ಕಾರಣವಾಯಿತು. ಬಡಗಿನ ಇನ್ನೋರ್ವ ಹಿರಿಯ ಕಲಾವಿದರಾದ ಈಶ್ವರ ನಾಯ್ಕ್ ಮಂಕಿ ಜೋಡಿ ಆಗಿ ಭೀಷ್ಮ- ಪರಶುರಾಮನಾಗಿ ಅಭಿನಯಿಸಿ ಜನ ಮಾನಸದಲ್ಲಿ ಚಿರಸ್ಥಾಯಿಯಾದರು. ಕಾರ್ತವೀರ್ಯಾರ್ಜುನದಲ್ಲಿ ಜಲವಳ್ಳಿಯವರ ಕಾರ್ತವೀರ್ಯ – ಪ್ರಸನ್ನರ ರಾವಣ ಪಾತ್ರ, ಗದಾಯುದ್ಧದಲ್ಲಿ ಜಲವಳ್ಳಿಯವರ ಕೌರವ ಪ್ರಸನ್ನರ ಭೀಮನ ಪಾತ್ರ ಇಂದಿಗೂ ಜನರ ಮನಸ್ಸಿನಲ್ಲಿ ಉಳಿಯಬಹುದಾದ ಪಾತ್ರಗಳಾಗಿವೆ. ಪ್ರಸನ್ನ ಅವರನ್ನು ಕೊಂಡದಕುಳಿಗೆ ಹೋಲಿಕೆ ಮಾಡುತ್ತಿರುವ ಜನರು ಬಡಾಬಡಗಿನ ಕಣ್ಣಿಮನೆ, ಯಾಜಿ, ಚಿಟ್ಟಾಣಿಗೆ ಹೋಲಿಸಿ ಸ್ಪೂರ್ತಿದಾಯಕ ಕಲಾವಿದರೆನಿಸಿಕೊಂಡಿದ್ದಾರೆ.

ಯಕ್ಷ ಗುರುಗಳಾದ ಎಂ.ಕೆ. ರಮೇಶ ಆಚಾರ್ಯ, ಆರ್ಗೋಡು ಮೋಹನದಾಸ ಶೆಣೈ, ಖ್ಯಾತ ಪ್ರಸಂಗಕರ್ತ ಬೇಳೂರು ವಿಷ್ಣುಮೂರ್ತಿ ನಾಯಕ್, ಪವನ್ ಕಿರಣಕೆರೆ ಹಾಗೂ ಸಾಲಿಗ್ರಾಮ ಮೇಳದ ಯಜಮಾನರಾದ ಕಿಶನ್ ಕುಮಾರ್ ಹೆಗ್ಡೆ ಅವರು ಹೊಸ ಹೊಸ ವೇಷಗಳನ್ನು ಮಾಡುವಾಗ "ಈ ಪಾತ್ರವನ್ನು ನೀನೆ ಮಾಡಬೇಕು" ಎಂದು

ಮಾರ್ಗದರ್ಶನ ನೀಡಿ ಸ್ಫೂರ್ತಿ ತುಂಬುತ್ತಾರೆ ಎಂದು ನೆನೆಸಿಕೊಂಡಿದ್ದಾರೆ ಪ್ರಸನ್ನ ಶೆಟ್ಟಿಗಾರ್. ಯಕ್ಷರಂಗದಲ್ಲಿ ಹಂತ ಹಂತವಾಗಿ ಬೆಳೆದು ಪ್ರಬುದ್ಧ ಕಲಾವಿದರಾಗಿ 2023 24-ನೇ ಸಾಲಿನ ತಿರುಗಾಟದಲ್ಲಿ ಮೇಳದ ಹಿರಿಯ ಕಲಾವಿದರಾದ ಸ್ತ್ರೀವೇಷಧಾರಿ ಶಶಿಕಾಂತ್ ಶೆಟ್ಟಿ ಮತ್ತು ಮಂಕಿ ಈಶ್ವರ ನಾಯ್ಕ್ ಇವರ ಮಾರ್ಗದರ್ಶನದಲ್ಲಿ ಮೇಳದ ಯಜಮಾನರ ಕೃಪೆಯಿಂದ ಸಾಲಿಗ್ರಾಮ ಮೇಳದಲ್ಲಿ ಪ್ರಧಾನ ವೇಷಧಾರಿಯಾಗಿ ಅಲಂಕರಿಸಿದ್ದು, ಇದು ಅವರ ಕಲಾ ಸಾಧನೆಗೆ ಸಿಕ್ಕ ಗೌರವ.

ಪ್ರಸನ್ನ ಶೆಟ್ಟಿಗಾರರ ತಂದೆ ಗಂಗಾಧರ ಶೆಟ್ಟಿಗಾರ್ ಮತ್ತು ತಾಯಿ ಸುಲೋಚನ ಶೆಟ್ಟಿಗಾರ್. ಜನಿಸಿದ್ದು ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲೂಕಿನ ಮಂದಾರ್ತಿಯಲ್ಲಿ. ಅವರದು ಪತ್ನಿ ವೀಣಾ, ಮಗಳು ಧನಿಷ್ಕ ಇವರೊಂದಿಗೆ ಸುಖೀ ಸಂಸಾರ. ಹೇಳಿಕೊಳ್ಳುವಂತಹ ಕಲಾ ಹಿನ್ನೆಲೆ ಇಲ್ಲದ ಕುಟುಂಬದಿಂದ ಬಂದ ಇವರು ತಂದೆ ತಾಯಿಯ ಕಲಾ ಪ್ರೇರಣೆಯನ್ನು ಸದಾ ನೆನಪಿಸಿಕೊಳ್ಳುತ್ತಾರೆ. ತಂತ್ರಾಡಿ ಮಕ್ಕಳ ಮೇಳದ ಹಿರಿಯಣ್ಣಶೆಟ್ಟಿಗಾರ್ ಅವರಿಂದ ಕಲಾ ದೀಕ್ಷೆ ಪಡೆದ ಇವರು ಅನಂತರ ಕಲಿತದ್ದು ಮಂದಾರ್ತಿ ಮೇಳದಲ್ಲಿ. ತನ್ನ ಹುಟ್ಟೂರಾದ ಮಂದಾರ್ತಿಯಲ್ಲಿಯೇ ಪಿಯುಸಿ ವರೆಗಿನ ಶಿಕ್ಷಣ ಪಡೆದು 19ರ ಹರೆಯದಲ್ಲಿ ಕಲಾಜೀವನ ಆರಂಭಿಸಿದ ಶೆಟ್ಟಿಗಾರರು ಮಂದಾರ್ತಿ ಮೇಳದಲ್ಲಿ ಏಳು ವರ್ಷ ತಿರುಗಾಟ ಮಾಡಿ, ಸಾಲಿಗ್ರಾಮ ಮೇಳಕ್ಕೆ ಸೇರಿ 13 ವರ್ಷಗಳಿಂದ ಪ್ರಧಾನ ಕಲಾವಿದರಾಗಿ ಕಲಾನುಭವ ಪಡೆದಿದ್ದಾರೆ.






ಯಾಜಿ ಮತ್ತು ಕೊಂಡದಕುಳಿಯವರನ್ನು ಮೆಚ್ಚುವ ಶೆಟ್ಟಿಗಾರರಲ್ಲಿ ಯಾಜಿಯ ಗಾಂಭೀರ್ಯ, ಕೊಂಡದಕುಳಿಯವರ ಲಾಲಿತ್ಯವಿದೆ. ಆದ್ದರಿಂದಲೇ ಕಟ್ಟುವೇಷ ಮತ್ತು ರಾಜವೇಷಗಳನ್ನು ಸುಲಲಿತವಾಗಿ ನಿಭಾಯಿಸುವ ಚಾಕಚಕ್ಯತೆ ಇವರಲ್ಲಿದೆ. ಯಾವುದೇ ವೇಷವಿರಲಿ, ಪ್ರಸನ್ನ ಶೆಟ್ಟಿಗಾರರು ತನ್ನದೇ ಆದ ಛಾಪು ಮೂಡಿಸಬಲ್ಲರು. ಹಳೆಯ ಮತ್ತು ಹೊಸ ಪ್ರಸಂಗಗಳನ್ನು ಸಮಾನವಾಗಿ ಇಷ್ಟಪಡುವ ಅವರು ಉಭಯ ಪ್ರಸಂಗಗಳ ಪಾತ್ರಗಳಿಗೂ ಸೈ ಎನಿಸಿಕೊಂಡಿದ್ದಾರೆ. ವೇಷಕ್ಕೆ ಬೇಕಾದ ಸದೃಢವಾದ ಶರೀರ- ಶಾರೀರ, ಆಕರ್ಷಣೀಯ ಸ್ಫುರದ್ರೂಪ, ಕುಣಿತದಲ್ಲಿ ವಿವಿಧ ವಿನ್ಯಾಸಗಳು, ಭಾಷೆ -ಭಾವಗಳ ಮಧುರ ಮೈತ್ರಿ, ವಿನಯ ಗುಣ, ಮಿತ ಭಾಷಿತ್ವ, ಸ್ನೇಹಶೀಲತೆ ಇವರನ್ನು ಬಹಳ ಎತ್ತರಕ್ಕೆ ಕೊಂಡೊಯ್ದಿವೆ. "ಎಲ್ಲಾ ಪಾತ್ರಗಳನ್ನು ನಿರ್ವಹಿಸಿದ್ದೇನೆ. ಆದರೆ ದಶರಥನ ಪಾತ್ರವನ್ನು ಮಾಡಲು ಕಾಯುತ್ತಿದ್ದೇನೆ" ಎನ್ನುತ್ತಾರೆ ಪ್ರಸನ್ನ. ಪ್ರಸ್ತುತ ಬಡಗಿನ ಸಾಲಿಗ್ರಾಮ ಡೇರೆ ಮೇಳದಲ್ಲಿ ಪ್ರಸಂಗ ಕರ್ತ ದೇವದಾಸ್ ಈಶ್ವರ ಮಂಗಲ ವಿರಚಿತ ನೂತನ ಸಾಮಾಜಿಕ ಕಥಾನಕ 'ಶುಭ ಲಕ್ಷಣ' ಪ್ರಸಂಗದಲ್ಲಿ ಕಥಾನಾಯಕ 'ಶುಭಕರ' ಪಾತ್ರದಲ್ಲಿ ಜನಮನ ಗೆದ್ದಿದ್ದಾರೆ.

ಪ್ರಸನ್ನ ಶೆಟ್ಟಿಗಾರ್ 'ವೈಶಂಪಾಯನ ತೀರ' ಚಲನಚಿತ್ರದಲ್ಲಿ ಅಭಿನಯಿಸಿ ಭೇಷ್ ಎನಿಸಿಕೊಂಡಿದ್ದಾರೆ. ಸಂಗೀತ ನಿರ್ದೇಶಕ ರವಿ ಬಸ್ರೂರು ಅವರ ದೊಡ್ಡ ಬಜೆಟ್ ನಲ್ಲಿ ನಿರ್ಮಾಣವಾಗುತ್ತಿರುವ 'ವೀರ ಚಂದ್ರಹಾಸ' ಯಕ್ಷಗಾನ ಚಲನಚಿತ್ರದಲ್ಲಿ ಪ್ರಸನ್ನ ಶೆಟ್ಟಿಗಾರರು ದುಷ್ಟಬುದ್ಧಿ ಪಾತ್ರದಲ್ಲಿ ಅಭಿನಯಿಸುತ್ತಿದ್ದು ಈ ಚಿತ್ರ ಶೀಘ್ರದಲ್ಲಿಯೇ ತೆರೆ ಕಾಣಲಿದೆ.

ಶೆಟ್ಟಿಗಾರರಿಗೆ ಕರಾವಳಿಯಲ್ಲಿ ಮಾತ್ರವಲ್ಲ ಬೆಂಗಳೂರು, ಮುಂಬೈ ಮಹಾನಗರಗಳಲ್ಲೂ ಅಭಿಮಾನಿಗಳಿದ್ದಾರೆ. ಇವರು ಡಾ. ಶಾಂತಾರಾಮ್ ಪ್ರಶಸ್ತಿ ಪಡೆದಿರುವುದಲ್ಲದೆ ಹಲವಾರು ಸಂಘ-ಸಂಸ್ಥೆಗಳು ಇವರನ್ನು ಗುರುತಿಸಿ ಸನ್ಮಾನ ಮಾಡಿದ್ದಾರೆ. ಪ್ರತೀ ಪಾತ್ರದಲ್ಲೂ ತನ್ಮಯತೆಯಿಂದ ಅಭಿನಯಿಸಿ ಜೀವ ತುಂಬುವ ಪ್ರಸನ್ನ ಎಂದೂ ಅಭಿಮಾನಿಗಳ ನಿರೀಕ್ಷೆಯನ್ನು ಹುಸಿ ಮಾಡಿದವರಲ್ಲ.



**ಸುಧಾಕರ ವಕ್ವಾಡಿ**
**ಸಂಪಾದಕರು,**
**ಕನ್ನಡ ಕರಾವಳಿ ಸುದ್ದಿ ಜಾಲತಾಣ**

# ಶೆಟ್ಟಿಗಾರ ವಾಣಿ

## ಸಮಾಜ ಬಾಂಧವರ ಅವಗಾಹನೆಗಾಗಿ

- ಸಮಾಜದಲ್ಲಿರುವ ಸಾಹಿತ್ಯ ರಂಗದ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಉದ್ದೇಶ ಹೊಂದಿರುವ **ಶೆಟ್ಟಿಗಾರ ವಾಣಿ** ತನ್ನ ಪ್ರಕಟಣೆಯನ್ನು ಪ್ರಾರಂಭಿಸಿ ಪ್ರಗತಿ ಪಥದಲ್ಲಿದ್ದು ಸಮಾಜ ಬಾಂಧವರ ಮೆಚ್ಚುಗೆಗೆ ಪಾತ್ರವಾಗಿದೆ.

- ಸಮಾಜ ಬಾಂಧವರು ಬರೆದಿರುವ ಕಥೆ, ಕವನ, ಪ್ರಬಂಧ, ಪ್ರವಾಸ ಕಥನಗಳು, ವೈಚಾರಿಕ ಲೇಖನಗಳು, ವೃತ್ತಿ ಮತ್ತು ಜೀವನ ಅನುಭವ ಗಾಥೆಗಳು, ನಗೆ ಬರಹಗಳು, ವ್ಯಂಗ್ಯ ಮತ್ತು ರೇಖಾಚಿತ್ರಗಳು ಮೊದಲಾದ ವಿಭಿನ್ನ ಸಾಹಿತ್ಯ ಕೃತಿಗಳನ್ನು ಸ್ವೀಕರಿಸಲಾಗುವುದು.

- ಆಯ್ಕೆಯಾದ ಬರಹಗಳನ್ನು ಪತ್ರಿಕೆಯ ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.

- ಬರಹಗಳ ಆಯ್ಕೆ ಮತ್ತು ಪ್ರಕಟಣೆಯ ವಿಷಯದಲ್ಲಿ ಪತ್ರಿಕೆಯ ತೀರ್ಮಾನವೇ ಅಂತಿಮವಾಗಿರುತ್ತದೆ.

- ಲೇಖಕರು ತಮ್ಮ ಹೆಸರು, ವಿಳಾಸ, ಭಾವಚಿತ್ರ ಮತ್ತು ಕಿರು ಪರಿಚಯವನ್ನು ಲೇಖನದೊಂದಿಗೆ ನಮೂದಿಸಬೇಕು.

- ಪತ್ರಿಕೆಯ ಸರ್ವಾಂಗೀಣ ಪ್ರಗತಿಗೆ ಸಲಹೆ ಸೂಚನೆಗಳನ್ನು ಸಾದರದಿಂದ ಸ್ವೀಕರಿಸಲಾಗುವುದು.

ಆಸಕ್ತರು ತಮ್ಮ ಬರಹಗಳನ್ನು (WORD FILE) ಇಮೇಲ್ ಮೂಲಕ ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿಸಲಾಗಿದೆ (ಹೆಚ್ಚಿನ ಮಾಹಿತಿ, ವಿವರ ಮತ್ತು ನಿಮ್ಮ ಅನಿಸಿಕೆಗಳಿಗೆ ಸಂಪರ್ಕಿಸಿ):

**shettigaravani@gmail.com**
**ವಾಟ್ಸಪ್ ನಂ. 9845660131**

ಪತ್ರಿಕೆಯ ಓದುಗರು ತಮ್ಮ ಅನಿಸಿಕೆ ಮತ್ತು ಸಲಹೆಗಳನ್ನು ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರಿಕೆ:

**shettigaravani@gmail.com**
**Mob. No. 9845660131**